Swabhimani Sahakari

Pages : 40 / 20₹

Volume - 21
Issue - 09
September - 2024

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



ಸೆಪ್ಟೆಂಬರ್ ೦6_೦7
ಗೌರಿ, ಗಣೇಶ

ಗಜಮುಖನೇ ಗಣಪತಿಯೇ ನಿನಗೆ ವಂದನೆ।
ನಂಬಿದವರ ಪಾಲಿನ ಕಲ್ಪತರು ನೀನೆ॥
॥ಪಾರ್ವತೀ ಪರಶಿವನ ಪ್ರೇಮ ಪುತ್ರನೇ।
ಪಾಲಿಸುವ ಪರದೈವ ಬೇರೆ ಕಾಣೆ।

– ವಿಜಯ ನಾರಸಿಂಹ

ಸೆಪ್ಟೆಂಬರ್ ೦5
ಶಿಕ್ಷಕರ ದಿನಾಚರಣೆ



ಸೆಪ್ಟೆಂಬರ್ 16
ಈದ್–ಮಿಲಾದ್



ಸೌಹಾರ್ದ ಸಹಕಾರಿಗಳ ಸಂಖ್ಯೆ : 6351

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1663



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಗಣೇಶ ಚತುರ್ಥಿಯ, ಸೆಂಟ್ ಮೇರಿ ಹಾಗೂ ಈದ್ ಮಿಲಾದ್ ಹಬ್ಬಗಳ ಹಾಗೂ ಶಿಕ್ಷಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಸಂಕಷ್ಟಹರ ಗಣಪನು ಸೌಹಾರ್ದ ಸಹಕಾರಿಗಳ ಎಲ್ಲಾ ಸಂಕಷ್ಟಗಳನ್ನು ನಿವಾರಣೆ ಮಾಡಿ ಅವರ ಜೀವನದಲ್ಲಿ ಸುಖ, ಶಾಂತಿ ಹಾಗೂ ನೆಮ್ಮದಿಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

# ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯು ಯಶಸ್ವಿಯಾಗಲು ಸಹಕರಿಸಿದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಯವರಿಗೆ ಧನ್ಯವಾದಗಳು.

ಆತ್ಮೀಯ ಸಹಕಾರಿ ಬಂಧುಗಳಿಗೆ ಗಣೇಶ ಚತುರ್ಥಿಯ, ಸೆಂಟ್ ಮೇರಿ ಹಾಗೂ ಈದ್ ಮಿಲಾದ್ ಹಬ್ಬಗಳ ಹಾಗೂ ಶಿಕ್ಷಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಸಂಕಷ್ಟಹರ ಗಣಪನು ಸೌಹಾರ್ದ ಸಹಕಾರಿಗಳ ಎಲ್ಲಾ ಸಂಕಷ್ಟಗಳನ್ನು ನಿವಾರಣೆ ಮಾಡಿ ಅವರ ಜೀವನದಲ್ಲಿ ಸುಖ, ಶಾಂತಿ ಹಾಗೂ ನೆಮ್ಮದಿಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಆತ್ಮೀಯರೆ, ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ಶಾಂತಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ಜರುಗಲು ಸಹಕರಿಸಿದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತದೆ. ರಾಜ್ಯದಲ್ಲಿ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಎಲ್ಲ ಮಹಾಮಂಡಳಗಳ ಸಾಮಾನ್ಯ ಸಭೆಗಳಿಗಿಂತ ವಿಭಿನ್ನ, ವೈಶಿಷ್ಟಪೂರ್ಣ ಹಾಗೂ ಸಹಕಾರಿಗಳ ಮೆಚ್ಚುಗೆಗೆ ಪಾತ್ರವಾಗಿರುವಂತಹ ಸಭೆ. ಸದಸ್ಯರ ಸಕ್ರೀಯ ಭಾಗವಹಿಸುವಿಕೆ, ಸಭೆಯಲ್ಲಿನ ಶಿಸ್ತು ಹಾಗೂ ಗೌರವದ ನಡೆಗಳು, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಹೆಮ್ಮೆ. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ರಾಜ್ಯದ ಶ್ರೇಷ್ಠ ಸಹಕಾರಿಗಳನ್ನು, ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಗುರುತಿಸಿ ಸನ್ಮಾನಿಸುವುದು, ಕರ್ನಾಟಕ ಸರಕಾರದಿಂದ ನೀಡುವ ಪ್ರತಿಷ್ಠಿತ ಸಹಕಾರಿ ರತ್ನ ಪುರಸ್ಕೃತರಿಗೆ ಅಭಿನಂದಿಸುವುದು ಒಂದು ಉತ್ತಮ ಸಂಪ್ರದಾಯವಾಗಿದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವುದಕ್ಕೆ ಪ್ರೇರಣಾದಾಯಕವಾಗಿರುತ್ತದೆ. ಅದರಂತೆ ತಾಂತ್ರಿಕ ಮೇಳದ ವ್ಯವಸ್ಥೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಅವಶ್ಯಕವಾಗುವ ತಂತ್ರಜ್ಞಾನದ ಮಾಹಿತಿ ಒದಗಿಸುವ ವ್ಯವಸ್ಥೆ ಹಾಗೂ ಸೌಹಾರ್ದ ಸಹಕಾರಿಗಳು ಉತ್ಪಾದಿಸುವ ವಸ್ತುಗಳ ಪರಿಚಯ, ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಎಲ್ಲವೂ ಒಂದು ರೀತಿಯ ಹಬ್ಬದ ವಾತಾವರಣವನ್ನು ಉಂಟು ಮಾಡಿತ್ತು. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಮುಖದಲ್ಲಿ ಸಂತೋಷ ಹಾಗೂ ಸಡಗರ ಎದ್ದು ಕಾಣುತ್ತಿತ್ತು. ಇದು ಸಂಯುಕ್ತ ಸಹಕಾರಿಯ ಹೆಮ್ಮೆಯ ಹಾಗೂ ಸೌಹಾರ್ದ ಸಹಕಾರಿಗಳಿಗೆ ಕಿರೀಟ ಪ್ರಾಯ.

ವಾರ್ಷಿಕ ಸಾಮಾನ್ಯ ಸಭೆಯ ನಂತರದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ (ಡಿ.ಸಿ.ಬಿ.ಎಮ್) ಒಂದನೇಯ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ವಿತರಣಾ ಕಾರ್ಯಕ್ರಮ ಅತ್ಯಂತ ಉತ್ತಮವಾಗಿ ಮೂಡಿಬಂತು. ಹಿರಿಯ ಸಹಕಾರಿ ರಾಜ್ಯದ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ, ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶ್ರೀ ಹೆಚ್.ಕೆ. ಪಾಟೀಲ್ ರವರು ಅಗ್ರ ಕ್ರಮಾಂಕಿತರಿಗೆ ಪ್ರಮಾಣ ಪತ್ರ ವಿತರಿಸಿರುವುದು, ನಂತರದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಶ್ರೀ ಸುರೇಶ ನಾಡಗೌಡರ ಮತ್ತು ವಿಶ್ರಾಂತ ಕುಲಪತಿಗಳಾದ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ಮತ್ತು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಸೇರಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿರುವುದು ಒಂದು ಉತ್ತಮ ಕಾರ್ಯಕ್ರಮದ ಸಾಕ್ಷಿ ಎಂದು ಭಾವಿಸಿದ್ದೇನೆ. ಸಂಯುಕ್ತ ಸಹಕಾರಿಯ ಈ ಎಲ್ಲಾ ಸಡಗರ ಹಾಗೂ ಸಂಭ್ರಮದ ಕಾರ್ಯಕ್ರಮಗಳಲ್ಲಿ ಭಾಗಿಯಾದ ಹಾಗೂ ಸಾಕ್ಷಿಯಾದ ಸಹಕಾರಿಗಳಿಗೆ ಹೃದಯಪೂರ್ವಕ ಧನ್ಯವಾದಗಳು.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 17–30
**ಲೇಖನಗಳು :**
ಸಂಸ್ಥೆಯ ಅಧಿಕಾರಿಗಳು ಮಾಡಿದ ಅವ್ಯವಹಾರಕ್ಕೆ ಚುನಾಯಿತ ಪ್ರತಿನಿಧಿಗಳು ಜವಾಬ್ದಾರರಲ್ಲವೇ? – ಒಂದು ವಿಮರ್ಷೆ .......... 32–33
ನಿಸ್ವಾರ್ಥ ಪ್ರಾಮಾಣಿಕ ದುಡಿಮೆಯ ಸಾಕರ ಮೂರ್ತಿ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ .......... 34–35
FINANCIAL MANAGEMENT IN CO-OPERATIVES .......... 37-40

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳಲ್ಲಿ ಲಾಭಾಂಶ ವಿಲೇವಾರಿ : ಶಾಸನಾತ್ಮಕ ಜವಾಬ್ದಾರಿ

ಪ್ರತಿಯೊಂದು ಸೌಹಾರ್ದ ಸಹಕಾರಿಗಳ ಸಹಕಾರಿ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆ 25 ಸೆಪ್ಟೆಂಬರ್ ಒಳಗಾಗಿ ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಸಹಕಾರಿಯು ತಾನು ಗಳಿಸಿದ ಲಾಭಾಂಶದ ವಿಲೇವಾರಿಯನ್ನು ಸಾಮಾನ್ಯ ಸದಸ್ಯರ ಅನುಮೊದನೆ ಪಡೆಯಬೇಕಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಲೆಕ್ಕ ಪರಿಶೋಧನೆಯಾದ ಸಹಕಾರಿಯ ಲೆಕ್ಕಪರಿಶೊಧನಾ ವರದಿಯನ್ನು ಆಡಳಿತ ಮಂಡಳಿಯವರು ಪರಿಶೀಲಿಸಿ ವರದಿಯಲ್ಲಿರುವ ನ್ಯೂನತೆಗಳಿಗೆ ಅನುಪಾಲನಾ ವರದಿ ಸಮೇತ ಲಾಭಾಂಶ ವಿಲೇವಾರಿಗಾಗಿ ವಾರ್ಷಿಕ ಸಾಮಾನ್ಯ ಸಭೆಯ ಅನುಮೊದನೆಗಾಗಿ ಮಂಡಿಸುವುದು ಕಡ್ಡಾಯವಾಗುತ್ತದೆ.

ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ಸಹಕಾರಿಯ ಅತ್ಯಂತ ಮಹತ್ವದ ಹಾಗೂ ಅರ್ಥಪೂರ್ಣವಾದ ಸಭೆಯಾಗಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಉತ್ಸಾಹದಿಂದ ಮತ್ತು ಸಂತೋಷದಿಂದ ಭಾಗವಹಿಸುವಂತೆ ಕ್ರಮವಿಡಬೇಕು. ಸದಸ್ಯರು ತಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ಮುಂಬರುವ ದಿನಗಳಲ್ಲಿ ಸಹಕಾರಿಯ ಕ್ರೀಯಾ ಯೊಜನೆ ಹೇಗಿರಬೇಕು ಎಂಬುವುದರ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಬೇಕಾಗುತ್ತದೆ. ಇದರ ಬಗ್ಗೆ ಸದಸ್ಯರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಸಹಕಾರಿಗಳಿಂದ ಆಗಬೇಕು.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಕಲಂ 10 ಉಪವಿಧಿಗಳು ಉಪ ಕಲಂ xxi ರಡಿಯಲ್ಲಿ ಹಾಗೂ ಪ್ರತಿಯೊಂದು ಸಹಕಾರಿಯು ತಾನು ಅಳವಡಿಸಿಕೊಂಡಿರುವ ನಿಯಮಗಳ ಪ್ರಕಾರ ನಿವ್ವಳ ಲಾಭದಲ್ಲಿ ಮುಖ್ಯವಾಗಿ 1. ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು 2. ಸಹಕಾರ ಶಿಕ್ಷಣ, ತರಬೇತಿ ಹಾಗೂ ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ 1960ರಡಿಯಲ್ಲಿ ನೊಂದಾಯಿತವಾದ ಸಹಕಾರ ಅಕಾಡೆಮಿ ಮೈಸೂರು (ಪ್ರಸ್ತುತ ಇದು ಕಾರ್ಯಾಚರಣೆ ಮಾಡುತ್ತಿಲ್ಲವಾದ್ದರಿಂದ ಈ ಮೊತ್ತವನ್ನು ತೆಗೆದಿರಿಸಿ ಸಹಕಾರಿಯಲ್ಲಿ ಪ್ರತ್ಯೇಕ ಖಾತೆಯಲ್ಲಿಡಬೇಕಾಗುತ್ತದೆ.) ನಂತರ ನೇರ ಪದ್ಧತಿಯಲ್ಲಿ ಶೇಕಡಾ 2% ಮೊತ್ತವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸಬೇಕು. ಈ ಮೊತ್ತವನ್ನು ಪಾವತಿಸದೇ ಸಹಕಾರಿಯು ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ವಿತರಿಸಲು ಅವಕಾಶವಿರುವುದಿಲ್ಲ. ನಂತರ ಅನಿರೀಕ್ಷಿತ ನಷ್ಟ ಅಥವಾ ಸಾಧಿಲ್ವಾರು ಭರಿಸಲು ಶೇಕಡಾ 20% ತೆಗೆದಿರಿಸಬೇಕು. ನಂತರ ಸಾಮಾನ್ಯ ನಿಕಾಯವು ಅನುಮೊದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡಾ 5% ತೆಗೆದಿರಿಸಬೇಕು. ಇದಲ್ಲದೆ ಉಪವಿಧಿಗಳಲ್ಲಿ ನಮೂದಾಗಿರುವ ವಿಶೇಷ ನಿಧಿಗಳ ರಚನೆ ಮತ್ತು ಅವುಗಳಿಗೆ ವಂತಿಗೆಗಳನ್ನು ತೆಗೆದಿರಿಸಿದ ಬಳಿಕ ಸಹಕಾರಿಯ ಸಿಬ್ಬಂದಿಯವರಿಗೆ ಅವರ ಎರಡು ತಿಂಗಳ ಸಂಬಳ ಮೀರದಂತೆ ಬೋನಸ್ ಅನ್ನು ತೆಗೆದು ಪಾವತಿಗೆ ಕ್ರಮವಿಡಬೇಕು.

ಸಹಕಾರಿಯ ಉಪವಿಧಿ ಸಹಕಾರಿಯ ಸಂವಿಧಾನವಿದ್ದಂತೆ. ಯಾವುದೇ ಕ್ರಮ ಜರುಗಿಸುವುದಾದಲ್ಲಿ ಉಪವಿಧಿಗಳ ವ್ಯಾಪ್ತಿಯೊಳಗೆ ನಿರ್ವಹಿಸುವುದು ಅಗತ್ಯ. ಪ್ರತಿಯೊಂದು ಸಹಕಾರಿಯು ಸೌಹಾರ್ದ ಸಹಕಾರಿಯ ಕಾಯ್ದೆಯ ನಿಯಮಗಳ ಸಂಬಂಧಿಸಿದ ಇತರೆ ಕಾನೂನುಗಳ ಪುಸ್ತಕಗಳನ್ನು ಹಾಗೂ ಉಪವಿಧಿಗಳ ಪ್ರತಿಗಳನ್ನು ಸಹಕಾರಿಯಲ್ಲಿಟ್ಟು ಸಹಕಾರಿಯು ಕಾನೂನಿನ ಚೌಕಟ್ಟಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗುವುದು ಅವಶ್ಯಕ.

## "ಶಾಶ್ವತ ಸತ್ಯ"



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಈ ಜಗತ್ತಿನಲ್ಲಿ ಅತಿ ಸೂಕ್ಷ್ಮವಾದ, ಸ್ಥೂಲವಾದ ಅಸಂಖ್ಯ ವಸ್ತುಗಳಿವೆ. ಅವು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅತ್ಯಂತ ಸ್ಥೂಲವಾದದ್ದು ಕಾಣುತ್ತದೆ. ಕಾಣದ ಹಾಗೂ ಕಾಣುವ ವಸ್ತುಗಳು ವಿಶ್ವದಲ್ಲಿ ಹರಡಿಕೊಂಡಿವೆ. ಭೂಮಿ ಸ್ಥೂಲ. ಅದು ಕಾಣುತ್ತದೆ. ಆದರೆ ಅದರಲ್ಲಿರುವ ಗುರುತ್ವಾಕರ್ಷಣ ಸೂಕ್ಷ್ಮ ಕಾಣುವುದಿಲ್ಲ. ಅದಿಲ್ಲದಿದರೆ ಚಲನವಲನ ಕಷ್ಟವಾಗುತ್ತದೆ. ಒಂದು ಕಲ್ಲನ್ನು ಮೇಲೆ ತೂರಿದರೆ, ಆ ಶಕ್ತಿ ಅದನ್ನು ಕೆಳಗೆ ಜಗ್ಗುತ್ತದೆ. ಈ ಶಕ್ತಿ ಕಾಣುವುದಿಲ್ಲ. ಆದರೆ ಅದರ ಶಕ್ತಿ ಅದ್ಭುತ, ಹೂ ಅರಳುವುದು ಕಾಣುವುದಿಲ್ಲ. ಅದರ ಒಳಗೆ ಜೀವವಿದೆ, ಆದರೆ ಅದು ಕಾಣುವುದಿಲ್ಲ. ಹೂವಿನ ಸುಗಂಧವನ್ನು ಹಿಡಿದಿಡುವುದಕ್ಕೆ ಆಗುವುದಿಲ್ಲ.

ಪ್ರತಿಯೊಂದು ವಸ್ತುವಿನಲ್ಲಿ ಕೆಲವು ಕಂಡರೆ ಕೆಲವು ಕಾಣುವುದಿಲ್ಲ, ಆದರೆ ಇವೆರಡೂ ಆಶಾಶ್ವತ. (ಶ್ವ ಅಂದರೆ ನಾಳೆ). ವಸ್ತುವಿನಲ್ಲಿರುವ ಆ ಕಾಣುವ ಹಾಗೂ ಕಾಣದ ಗುಣಗಳೆರಡೂ ಶಾಶ್ವತ ಇರುವುದಿಲ್ಲ. ಮರೆಯಾಗಿ ಹೋಗುತ್ತದೆ ಇದೇ ರೀತಿ ಜಗತ್ತು ಇಂದು ಇರುತ್ತದೆ. ನಾಳೆ ಇರುವುದಿಲ್ಲ ಇದೆಲ್ಲಾ ಅನುಭವಕ್ಕೆ ಬರುತ್ತದೆ. ಇದಕ್ಕೆ ದೊಡ್ಡ ತಪಸ್ಸಿನ ಅವಶ್ಯಕತೆಯಿಲ್ಲ. ಈ ಅಶಾಶ್ವತ ಜಗತ್ತಿನ ಹಿಂದೆ ಒಂದು ಶಾಶ್ವತ ಸತ್ಯ ಇದೆ. ಅದು ಈ ವಸ್ತು, ಶರೀರ, ಜಗತ್ತು ಇದ್ದಾಗಲೂ ಇರುತ್ತದೆ, ಅವೆಲ್ಲ ಹೋದಾಗಲೂ ಇರುತ್ತದೆ. ಅದನ್ನು ನಾಶಮಾಡಲು ಸಾಧ್ಯವಿಲ್ಲ. ಶರೀರ, ವಸ್ತು, ಜಗತ್ತುಗಳನ್ನು ನಷ್ಟ ಮಾಡಬಹುದು, ಆದರೆ ಅವುಗಳಲ್ಲಿರುವ ಸತ್ಯವನ್ನು ನಷ್ಟ ಮಾಡಲು ಬರುವುದಿಲ್ಲ. ಆ ಸತ್ಯವೇ ದೇವರು, ಅದನ್ನು ಮೂಲತತ್ವ ಎನ್ನುವರು, ಅದೊಂದು ಪರಮ ಸತ್ಯ. ಅದನ್ನು ಯಾರಿಂದಲೂ ನಾಶ ಮಾಡಲು ಸಾಧ್ಯವಿಲ್ಲ. ಸತ್ಯ ಎಲ್ಲೆಡೆ ಇರುತ್ತದೆ. ಯಾವಾಗಲೂ ಇರುತ್ತದೆ.

ಯಾವುದು ಕಾಣಿಸುತ್ತದೆಯೋ, ಅಶಾಶ್ವತವೋ ಅದು ಜಗತ್ತು: ಯಾವುದು ಕಾಣಿಸುವುದಿಲ್ಲವೋ, ಶಾಶ್ವತವೋ ಅದು ದೇವರು, ಜಗತ್ತನ್ನು ನಾಶಗೊಳಿಸಬಹುದು, ಯಾರು ನಾಶಪಡಿಸದಿದ್ದರೂ ಅದು ತಾನಾಗಿಯೇ ನಾಶವಾಗುತ್ತದೆ. ಯಾವುದನ್ನು ಕಟ್ಟಿ ಹಾಕಲು ಬರುವುದಿಲ್ಲ. ಅಸತ್ಯವನ್ನು ಉಳಿಸಬಯಸಿದರೂ ಅದು ಅಶಾಶ್ವತ, ಆದರೆ ಸತ್ಯವನ್ನು ಕೊಲ್ಲಬಯಸಿದರೂ ಅದು ಶಾಶ್ವತ, ಇದನ್ನು ತಿಳಿದರೆ ಮನುಷ್ಯ ಶಾಂತಿಯಿಂದ ಇರುತ್ತಾನೆ. ಮನುಷ್ಯ ಇಚ್ಛಿಸಿದರೂ ಎಲ್ಲವನ್ನೂ ಉಳಿಸಿಕೊಳ್ಳಲಿಕ್ಕಾಗುವುದಿಲ್ಲ. ಒಳ್ಳೆಯದು, ಕೆಟ್ಟದೆದು ಎಲ್ಲವೂ ಹೋಗುತ್ತದೆ.

ಪ್ರಪಂಚ ಸಾಕು ಎನಿಸುವುದಿಲ್ಲ. ಪ್ರಪಂಚವೆಂದರೆ ಕೊಡುವುದು ತೆಗೆದುಕೊಳ್ಳುವುದು. ಇಬ್ಬರು ಮುದುಕರು ಜಗಳ ಮಾಡಿದರು. ಮೊಮ್ಮಕ್ಕಳಿಗಾಗಿ ಜಗಳ ಮಾಡಿದರು. ಒಬ್ಬ ಮೊಮ್ಮಗ ಇನ್ನೊಬ್ಬನ ಮನೆಯಲ್ಲಿದ್ದ ಗಿಡದ ಹಣ್ಣನ್ನು ಕದ್ದಿದ್ದ. ಅವರಿಬ್ಬರಿಗೂ ಜಗಳದ ತಾಪದಿಂದ ನಿದ್ದೆ ಹತ್ತಲಿಲ್ಲ. ಆ ಇನ್ನೋರ್ವ ಮುದುಕ ಕದ್ದ ಹುಡುಗನ ಮನೆಯಲ್ಲಿದ್ದ ಗಿಡವನ್ನು ಕಡಿದ. ಅಷ್ಟರಲ್ಲಿ ಆ ಮನೆ ಮಾಲೀಕ ಮುದುಕ ಎದ್ದು ಆ ಮುದುಕನನ್ನು ಹಿಡಿಯಲು ಬಂದ, ಅವನನ್ನು ಇವನು ಹಿಡಿಯುವಷ್ಟರಲ್ಲಿ ಅವನಿಗೆ ಹೃದಯಾಘಾತವಾಯಿತು. ಒಬ್ಬ ತೀರಿಹೋದ, ಒಬ್ಬ ಜೈಲಿಗೆ ಹೋದ.

ಕಾಲ ಎಲ್ಲವನ್ನೂ ಮುಗಿಸುತ್ತದೆ. ಮನುಷ್ಯ ಅವಸರ ಪಡುತ್ತಾನೆ ಅಷ್ಟೆ! ಎಲ್ಲವೂ ಬರುತ್ತದೆ. ಬಂದದ್ದು ಹೋಗುತ್ತದೆ. ಸ್ವಲ್ಪ ತಡೆದುಕೊ, ಆರಾಮ ಇರು. ಚಿಂತೆ ಮಾಡಬೇಡ. ನೋವು-ನಲಿವುಗಳೆರಡೂ ಉಳಿಯುವುದಿಲ್ಲ. ತಾಪ ಮಾಡಿಕೊಳ್ಳಬೇಡ. ಆದರೆ ಜಗತ್ತಿನಲ್ಲಿ ಈ ತತ್ವಗಳು ಮರೆಯಾಗಿವೆ. ಆವೇಶ ಆರಂಭವಾಗಿದೆ. ಆದರೆ ಕಾಲ ಎಲ್ಲವನ್ನೂ ನೋಡಿಕೊಳ್ಳುತ್ತದೆ. ನಾಶ ಆಗುವುದು ಮರೆಯಾಗುತ್ತದೆ. ಯಾವುದು ಸತ್ಯವೋ ಅದು ನಾಶವಾಗುವುದಿಲ್ಲ. ಅಂತಹ ಸತ್ಯ ವಸ್ತುವೇ ದೇವರು. ಅದನ್ನು ಭಾವಿಸು. ಆ ಸತ್ಯವೇ ನೀನಾದ ಬಳಿಕ ಇನ್ನೇನಿದೆ?

ನಾನು ಇರುವುದು ಇಷ್ಟೆ ಅಲ್ಲ, ಅದಕ್ಕಿಂಗ ಹೆಚ್ಚಿಗೆ ನಾನು ಇದ್ದೇನೆ. ಓಂಕಾರ ಎಂದರೆ ಈ ಅಶಾಶ್ವತ ಜಗತ್ತು ಮತ್ತು ಇದರ ಹಿಂದಿರುವ ಶಾಶ್ವತ ಸತ್ಯ ಎರಡೂ. ಓಂಕಾರಕ್ಕೆ ಎರಡು ಅಗ - ಓಂ ಎಂದಾಗ ಕಾಣುವುದು ಈ ಪ್ರಪಂಚದ ಸ್ಥೂಲ ಚಿತ್ರ. ಅದನ್ನು ಅಂದು ಮುಗಿಸಿದಾಗ ಕೇಳುವ ನಿಶ್ಯಬ್ದ ಸೂಕ್ಷ್ಮ ಸತ್ಯ. ಓಂ ಎಂದಾಗ ಆ ಶಾಶ್ವತ ಹಾಗೂ ಅಶಾಶ್ವತಗಳೆರಡೂ ಅನುಭವಕ್ಕೆ ಬರುತ್ತವೆ ಎಂದು ಹೇಳಿದಾಗ ಈ ಜಗತ್ತು ಹಾಗೂ ಅದರ ಹಿಂದಿರುವ ಸತ್ಯಗಳೆರಡೂ ಗೋಚರಿಸುತ್ತವೆ. ಆ ಧ್ವನಿಯನ್ನು ಅನುಭವಿಸಬೇಕು. ಆ ಶಬ್ದದ ಕಂಪನ ಮರೆಯಾದ ಬಳಿಕ ನಿಶ್ಯಬ್ದ. ಆ ನಿಶ್ಯಬ್ದವೇ ಅದೃಶ್ಯ ಓಂಕಾರ. ಅಲ್ಲಿ ಶಬ್ಧಗಳಿಲ್ಲ. ಕಂಪನಗಳಿಲ್ಲ. ಅದು ಪರಮ ಸತ್ಯ. ಅದನ್ನು ಭಾವಿಸಕೊಳ್ಳಬೇಕು ಈ ಪರಿಕಲ್ಪನೆ ಇದ್ದರೆ ಮನಸ್ಸು ಶಾಂತವಾಗುತ್ತದೆ. ಮನುಷ್ಯ ಪ್ರಸನ್ನನಾಗುತ್ತಾನೆ. ಏನು ಅನುಭವಕ್ಕೆ ಬರುತ್ತದೆಯೋ ಅದು ಪ್ರಸಾದ. ಮನಸ್ಸನ್ನು ಪ್ರಸನ್ನವಾಗಿಟ್ಟು ತಿನ್ನುವುದೇ ಪ್ರಸಾದ. ಇಡೀ ಜಗತ್ತೇ ಭಗವಂತನ ಪ್ರಸಾದ. ಜೀವನ ಪ್ರಸಾದ. ದೇಹವೂ ಒಂದು ಪ್ರಸಾದ. ಸುತ್ತಮುತ್ತಲಿನದೆಲ್ಲವೂ ಪ್ರಸಾದ. ಇವೆಲ್ಲವೂಗಳನ್ನು ಪ್ರಸನ್ನತೆಯಿಂದ ಅನುಭವಿಸಬೇಕು. ಅದು ಶಾಶ್ವತ ಪ್ರಸಾದ.

ಯಾವೂ ಶಾಶ್ವತ ಅಲ್ಲ. ಅಳು-ನಗು ಶಾಶ್ವತವಲ್ಲ. ಆಧ್ಯಾತ್ಮವೆಂದರೆ ಒಂದು ಪ್ರಯೋಗ. ಅದನ್ನು ಜೀವನಪೂರ್ತಿ ಮಾಡಬೇಕು. ಗಳಿಸಬೇಕು. ಗಳಿಸಿದ್ದು ಹೋದರೆ ಮರೆತುಬಿಡಬೇಕು. ವ್ಯವಧಾನ ಬೇಕು. ಕೆಟ್ಟದ್ದೂ ಹೋಗುತ್ತದೆ. ಒಳ್ಳೆಯದು ಹೋಗುತ್ತದೆ. ತುಂಬಿದ ಕೆರೆ ಹಾಗೇ ಇರುವುದಿಲ್ಲ. 'ಬದಲಾವಣೆ ಜಗತ್ತಿನ ನಿಯಮ' ಇದನ್ನು ಅರಿಯಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 37,044 ಆಗಿರುತ್ತದೆ. ಇವುಗಳ ಪೈಕಿ 30,515 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 6,529

**ಆಗಸ್ಟ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 324 ಇತ್ಯರ್ಥಗೊಂಡ ಪ್ರಕರಣಗಳು 1242

**ಅಮಲ್ಜಾರಿ ಪ್ರಕರಣಗಳು :** ಒಟ್ಟು 9,937 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,765 ಪ್ರಕರಣಗಳು ಇತ್ಯರ್ಥಗೊಂಡಿದ್ದು. 8172 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಆಗಸ್ಟ್ ತಿಂಗಳಿನಲ್ಲಿ ಒಟ್ಟು 262 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆ - ಸಂಭ್ರಮ, ಸಡಗರ ಹಾಗೂ ಅರ್ಥಪೂರ್ಣ ಸಭೆ.

## ಧ್ವಜಾರೋಹಣ :

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸಹಕಾರ ಧ್ವಜಾರೋಹಣ ಕಾರ್ಯಕ್ರಮವನ್ನು 9:45ಕ್ಕೆ ನೆರವೇರಿಸಿ ರಾಷ್ಟ್ರ ಗೀತೆ ನಂತರ ಎಲ್ಲ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಹಾಗೂ ಎಲ್ಲಾ ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮತ್ತು ರಾಜ್ಯದ ಎಲ್ಲ ಜಿಲ್ಲೆಗಳ ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.





## ತಂತ್ರಜ್ಞಾನ ಮೇಳ ಹಾಗೂ ವಸ್ತು ಪ್ರದರ್ಶಿನಿ ಉದ್ಘಾಟನೆ :

ತಂತ್ರಜ್ಞಾನ ಮೇಳವನ್ನು ಬೆಳಿಗ್ಗೆ 9:50ಕ್ಕೆ ಹಿರಿಯ ಸಹಕಾರಿ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಹಾಗೂ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಹಾಗೂ ಎಲ್ಲಾ ನಿರ್ದೇಶಕರು ಉದ್ಘಾಟಿಸಿದರು.

## ಸಾಮಾನ್ಯ ಸಭೆ :

ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 23ನೇ ಆಗಷ್ಟ 2024ರಂದು "ಪ್ರಿನ್ಸೆಸ್ ಗಾಲ್ಫ್, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು" ಇಲ್ಲಿ ಬೆಳಿಗ್ಗೆ 10.00ಕ್ಕೆ ಸರಿಯಾಗಿ ಶ್ರೀ ಮೊಹಮ್ಮದ್ ಫಜಲುದ್ದೀನ್ ಇವರ ಸಹಕಾರ ಗೀತೆ ಹಾಗೂ ಶ್ರೀಮತಿ ಜ್ಯೋತಿ ರವಿಪ್ರಕಾಶ್ ಹಾಗೂ ತಂಡದವರಿಂದ ಪ್ರಾರ್ಥನೆ, ರೈತಗೀತೆ ಹಾಗೂ ನಾಡಗೀತೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.



ಭಾಗವಹಿಸಿದ ಸಹಕಾರಿಗಳು



## ಸ್ವಾಗತ ಹಾಗೂ ಪರಿಚಯ :

ಸಭಾ ಕಾರ್ಯಕ್ರಮವನ್ನು ಶ್ರೀಮತಿ ಜ್ಯೋತಿ ರವಿಪ್ರಕಾಶ್ ಹಾಗೂ ತಂಡದವರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಇವರು ಅತಿಥಿ ಗಣ್ಯರಿಗೆ, ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ, ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸಹಕಾರಿಗಳಿಗೆ ಸ್ವಾಗತ ಮಾಡಿದರು.

**ಉದ್ಘಾಟನೆ** : 23ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು.



## ಸಂತಾಪ ಸೂಚಕ ಕಾರ್ಯಕ್ರಮ :

ಪ್ರಸಕ್ತ ಸಾಲಿನಲ್ಲಿ ನಿಧನರಾಗಿರುವ ಗಣ್ಯರಿಗೆ ಹಾಗೂ ಸಹಕಾರಿ ಕ್ಷೇತ್ರದ ಗಣ್ಯರಿಗೆ ಸಂತಾಪ ಸೂಚಿಸುವ ಕಾರ್ಯಕ್ರಮವನ್ನು ಎರಡು ನಿಮಿಷ ಮೌನ ಆಚರಿಸುವುದರೊಂದಿಗೆ ನಡೆಸಲಾಯಿತು. ನಿಧನರಾದ ಸೌಹಾರ್ದ ಸಹಕಾರಿ ಕ್ಷೇತ್ರದ ಗಣ್ಯರ ಹೆಸರುಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಓದಿದರು.



## ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ :

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಭಾಷಣ ಮಾಡಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತದ್ರ ಪ್ರಗತಿ 2023–24ನೇ ಸಾಲಿನ ಶಾಸನ ಬದ್ಧ ಹಾಗೂ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು, ಸಂಪರ್ಕ ಸಭೆಗಳು, ಪತ್ರಿಕಾಗೋಷ್ಠಿಗಳು, ವಾರ್ಷಿಕ ಸಾಮಾನ್ಯ ಸಭೆಯ ವೈಶಿಷ್ಠತೆ, ಟಾಸ್ಕ್‌ಫೋರ್ಸ್ ಕಾರ್ಯಚಟುವಟಿಕೆಗಳು ಹೀಗೆ ಎಲ್ಲ ವಿಷಯಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದು ಎಲ್ಲಾ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

## ಸಾಮಾನ್ಯ ಸಭೆಯ ಕಾರ್ಯಕಲಾಪಗಳು :

ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರ ಅಧ್ಯಕ್ಷತೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ವಿಷಯಗಳ ಪ್ರಸ್ತಾವನೆ ಮಾಡಿದರು. ಸಭೆಯು ಅರ್ಥಪೂರ್ಣ ಚರ್ಚೆ ನಡೆಸಿ ಸರ್ವಾನುಮತದಿಂದ ಎಲ್ಲಾ ವಿಷಯಗಳಿಗೆ ಅನುಮೋದನೆ ನೀಡಿತು.

23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 1785 ಪ್ರತಿನಿಧಿಗಳು ಹಾಗೂ 1500ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿದ್ದರು. ಸಾಮಾನ್ಯ ಸಭೆಯ ಅಂಗವಾಗಿ ಸದಸ್ಯ ಸಹಕಾರಿಗಳಿಗೆ ಹೆಚ್ಚಿನ ತಾಂತ್ರಿಕತೆಯನ್ನು ಪರಿಚಯಿಸುವುದಕ್ಕಾಗಿ ತಾಂತ್ರಿಕ ಮೇಳದ ವ್ಯವಸ್ಥೆ ಮಾಡಲಾಗಿತ್ತು. ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸದಸ್ಯರಿಂದ ಉತ್ಪಾದನೆವಾಗಿರುವ ವಸ್ತುಗಳ ಮಾರಾಟ ಮಳಿಗೆಯನ್ನೂ ಕೂಡ ವ್ಯವಸ್ಥೆ ಮಾಡಲಾಗಿತ್ತು.



## - : ವಿಶೇಷ ಸನ್ಮಾನ ಕಾರ್ಯಕ್ರಮ : -



ವಾರ್ಷಿಕ ಸಾಮಾನ್ಯ ಸಭೆಯ ನಂತರದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು, ಪ್ರೊ. ಡಾ. ವಿಷ್ಣುಕಾಂತ ಚಟಪಲ್ಲಿ, ಮಾನ್ಯ ವಿಶ್ರಾಂತ ಕುಲಪತಿಗಳು, ಕ.ರಾ.ಗ್ರಾ.ಪಂ.ರಾ. ವಿಶ್ವವಿದ್ಯಾಲಯ, ಗದಗ, ಪ್ರೊ. ಡಾ. ಸತೀಶ ವಿ. ನಾಡಗೌಡರ, ಮಾನ್ಯ ಕುಲಪತಿಗಳು (ಪ್ರ) ಹಾಗೂ ಕುಲಸಚಿವರು, ಕ.ರಾ.ಗ್ರಾ.ಪಂ.ರಾ.ವಿಶ್ವವಿದ್ಯಾಲಯ, ಗದಗ, ಡಾ. ಯಶವಂತ ಡೋಂಗ್ರೆ, ಮಾನ್ಯ ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ಸಿ. ಎನ್. ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ), ಮೈಸೂರು, ಶ್ರೀ ಶಶಿಧರ ಎಲೆ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ), ಬೆಂಗಳೂರು ಇವರುಗಳನ್ನು ಸಂಯುಕ್ತ ಸಹಕಾರಿಯ ಪರವಾಗಿ ವಿಶೇಷವಾಗಿ ಸನ್ಮಾನಿಸಲಾಯಿತು.






ಸಭೆಯಲ್ಲಿ ಮಾತನಾಡಿದ ಪ್ರತಿನಿಧಿಗಳು



ಮಾಜಿ ಕೇಂದ್ರ ಸಚಿವರು ಹಾಗೂ ಹಾಲಿ ವಿಧಾನ ಸಭಾ ಸದಸ್ಯರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳ, ಶ್ರೀ ಈರಣ್ಣ ಕಡಾಡಿ, ಮಾನ್ಯ ರಾಜ್ಯ ಸಭಾ ಸದಸ್ಯರು, ಶ್ರೀ ಎಂ.ಸಿ. ವೇಣುಗೋಪಾಲ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಶ್ರೀ ಪ್ರತಾಪ್ ರೆಡ್ಡಿ, ಮಾನ್ಯ ಮಾಜಿ ವಿಧಾನ ಸಭಾ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



23ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರದಲ್ಲಿ ಮಾತನಾಡಿದ **ಶ್ರೀ ಬಸನಗೌಡ ಪಾಟೀಲ್** ರವರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಕಾರ್ಯವೈಖರಿ ಬೇರೆ ಸಹಕಾರಿ ಸಂಸ್ಥೆಗಳಿಗೆ ಮಾದರಿ. ಈ ಸೌಹಾರ್ದ ಸಹಕಾರಿಗಳಿಗೆ ಸಂಕಷ್ಟಗಳು ಹಾಗೂ ಸವಾಲುಗಳು ಆಗಿಂದಾಗ್ಗೆ ಬರುತ್ತಿರುತ್ತವೆ. ಇವುಗಳನ್ನು ನಾವುಗಳು ಸಂಘಟಿತರಾಗಿ ಎದುರಿಸೋಣ ಎಂದು ಹೇಳಿದರು.

**ಶ್ರೀ ಈರಣ್ಣ ಕಡಾಡಿ** ಯವರು ಮಾತನಾಡಿ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು ಮತ್ತು ಈ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಎಲ್ಲರೂ ಸೇರಿ ಬಲಪಡಿಸೋಣ ಎಂದು ತಿಳಿಸಿದರು.

## - : ವಿಶೇಷ ಕಾರ್ಯಕ್ರಮ : -

### 2023ನೇ ಸಾಲಿನ ಸಹಕಾರ ರತ್ನ ಪುರಸ್ಕೃತರಿಗೆ - ಶ್ರೇಷ್ಠ ಸಹಕಾರಿಗಳಿಗೆ - ಉತ್ತಮ ಸೌಹಾರ್ದ ಸಹಕಾರಿಗಳಿಗೆ ಸನ್ಮಾನ ಕಾರ್ಯಕ್ರಮ

**ಸ್ವಾಗತ :** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ಸ್ವಾಗತ ಮಾಡಿದರು

**ಮುಖ್ಯ ಅತಿಥಿಗಳು :** ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು.

**ಅಧ್ಯಕ್ಷತೆ :** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು.

## ಸನ್ಮಾನ ಕಾರ್ಯಕ್ರಮ : ಶ್ರೇಷ್ಠ ಸಹಕಾರಿ ಹಾಗೂ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ ಕಾರ್ಯಕ್ರಮ

ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯ ನಂತರದಲ್ಲಿ ಆಯೋಜಿಸಲಾಗಿದ್ದ, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೇಷ್ಠ ಸಹಕಾರಿ ಹಾಗೂ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ್ಯ ಶ್ರೀ ಹೆಚ್ ಕೆ ಪಾಟೀಲ, ಮಾನ್ಯ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಅಭಿನಂದಿಸಿ ಸನ್ಮಾನಿಸಿದರು.

### ಸನ್ಮಾನಿತರಾದ ಉತ್ತಮ ಸೌಹಾರ್ದ ಸಹಕಾರಿಗಳು

1. ಸುದರ್ಶನ್ ಸೌಹಾರ್ದ ಸಹಕಾರಿ ನಿ., ತ್ರ್ಯಂಬಕೇಶ್ವರ ದೇವಸ್ಥಾನದ ಹಿಂಭಾಗ, ಮತ್ತೂರು ಅಂಚೆ, ಶಿವಮೊಗ್ಗ
2. ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕೊಡವ ಸಮಾಜ ಕಟ್ಟಡ, ಮುಖ್ಯರಸ್ತೆ, ಮಡಿಕೇರಿ, ಕೊಡಗು
3. ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹನುಮಸಾಗರ, ಕೊಪ್ಪಳ
4. ದಿ ಕರ್ನಾಟಕ ಮಲ್ಟಿಪರಪಜ್ ಸೌಹಾರ್ದ ಸಹಕಾರಿ ನಿ., ಭಾಗ್ಯಲಕ್ಷ್ಮಿನಗರ, ಚಿಕ್ಕೋಡಿ, ಬೆಳಗಾವಿ
5. ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಜೋಗ ರಸ್ತೆ, ಸಿದ್ದಾಪುರ, ಉತ್ತರ ಕನ್ನಡ

### ಸನ್ಮಾನಿತರಾದ ಶ್ರೇಷ್ಠ ಸಹಕಾರಿಗಳು

1. ಶ್ರೀ ಬಿ ಗಂಗಾಧರಯ್ಯ, ಮಾನ್ಯ ಅಧ್ಯಕ್ಷರು, ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು
2. ಶ್ರೀ ಸಿದ್ಧಲಿಂಗಯ್ಯ ಎಸ್, ಮಾನ್ಯ ಅಧ್ಯಕ್ಷರು, ಸಮೃದ್ಧಿ ಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಮದ್ದೂರು, ಮಂಡ್ಯ
3. ಶ್ರೀ ಸತೀಶ ಪಾಟೀಲ, ಮಾನ್ಯ ಅಧ್ಯಕ್ಷರು, ಶ್ರೀ ಕುಲಸ್ವಾಮಿನಿ ಸೌಹಾರ್ದ ಕೋ–ಆಪರೇಟಿವ್ ಲಿ., ಕಮಲನಗರ, ಬೀದರ್
4. ಶ್ರೀ ನರೇಂದ್ರ ಬಿ. ಶಹಾ, ಮಾನ್ಯ ಅಧ್ಯಕ್ಷರು, ಶ್ರೀ ನೇಮಿನಾಥ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಗೋಕಾಕ, ಬೆಳಗಾವಿ
5. ಶ್ರೀ ವಿಜಯ ಕುಮಾರ ದೇಸಾಯಿ, ಮಾನ್ಯ ಅಧ್ಯಕ್ಷರು, ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಬಾದಾಮಿ, ಬಾಗಲಕೋಟೆ



ಉತ್ತಮ ಸಹಕಾರಿ ಪ್ರಶಸ್ತಿ ಪುರಸ್ಕೃತರು



ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು

## 2023ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ :

ಸಾಮಾನ್ಯ ಸಭೆಯ ನಂತರದ ಮಧ್ಯಾಹ್ನದ ಅವಧಿಯಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಸನ್ಮಾನ ಕಾರ್ಯಕ್ರಮವನ್ನು ನೆರವೇರಿಸಿದರು.

**ಸಹಕಾರ ರತ್ನ ಪುರಸ್ಕೃತರು :**

1. ಶ್ರೀ ಎಂ.ಸಿ. ವೇಣುಗೋಪಾಲ್, ಮಾನ್ಯ ಅಧ್ಯಕ್ಷರು, ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ಲಿ., ಬೆಂಗಳೂರು.
2. ಶ್ರೀ ಎಂ. ಆರ್. ರಾಜಶೇಖರ್, ಮಾನ್ಯ ಅಧ್ಯಕ್ಷರು, ಕಾರ್ಯಸಿದ್ಧಿ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ಹನುಮಂತನಗರ, ಬೆಂಗಳೂರು.
3. ಶ್ರೀ ಕೆ. ಎಲ್. ಶಿವರಾಮು, ಮಾನ್ಯ ಅಧ್ಯಕ್ಷರು, ಸ್ಫೂರ್ತಿ ಕಾವೇರಿ ಸೌಹಾರ್ದ ಕೋ–ಆಪರೇಟಿವ್ ಲಿ., ವಿನೋಬಾ ರಸ್ತೆ, ಸುಬಾಷನಗರ, ಮಂಡ್ಯ.

4. ಶ್ರೀ ಎ. ಸುರೇಶ್ ರೈ, ಮಾನ್ಯ ಅಧ್ಯಕ್ಷರು, ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಪಂಪುವೆಲ್, ಮಂಗಳೂರು, ದಕ್ಷಿಣ ಕನ್ನಡ.
5. ಶ್ರೀ ರವೀಂದ್ರ ಕಲಬುರಗಿ ಪ್ರಲ್ಹಾದ, ಮಾನ್ಯ ನಿರ್ದೇಶಕರು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮೆಳ್ಳಿಗೇರಿ ಟವರ್ಸ್, ಸ್ಟೇಷನ್ ರೋಡ್, ಬಾಗಲಕೋಟೆ.



## ಗಣ್ಯ ಲೇಖಕರ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ

ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಡಾ.ಯಶವಂತ ಡೋಂಗ್ರೆ, ಮಾನ್ಯ ಕುಲಸಚಿವರು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪ್ರಸ್ತಕ "Autonomy, Governance and Empowerment : Study of Souharda Cooperatives", ಶ್ರೀ ಸಿ. ಎನ್ . ಪರಶಿವಮೂರ್ತಿ, ಮಾನ್ಯ ಅಪರ ನಿಬಂಧಕರು (ನಿ), ಇವರ ಪುಸ್ತಕ "ಸೌಹಾರ್ದ ಸಹಕಾರಿ ಕಾಯಿದೆ ಆಡಳಿತ ಕೈಪಿಡಿ", ಶ್ರೀ ಶಶಿಧರ ಎಲೆ, ಮಾನ್ಯ ಅಪರ ನಿಬಂಧಕರು (ನಿ), ಇವರ ಪುಸ್ತಕ "ಸಹಕಾರ ಅವಲೋಕನ" ಪುಸ್ತಕಗಳನ್ನು ಬಿಡುಗಡೆ ಮಾಡಿದರು.




## ಒಂದನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಉತ್ತೀರ್ಣ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಸಮಾರಂಭ ಕಾರ್ಯಕ್ರಮ.



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಜಂಟಿಯಾಗಿ ನಡೆಸುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಒಂದನೇ ತಂಡದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿತ್ತು. ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಮಾಣ ಪತ್ರವನ್ನು ವಿತರಿಸಿದರು.

## ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆದಿದೆ, ಜನರ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಬೇಕು. - ಸನ್ಮಾನ್ಯ ಶ್ರೀ ಹೆಚ್ ಕೆ ಪಾಟೀಲ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರದಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದ ಉದ್ಘಾಟಕರಾಗಿ ಭಾಗವಹಿಸಿದ್ದ ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಸಂಯುಕ್ತ ಸಹಕಾರಿಯ ಗೌರವವನ್ನು ಸ್ವೀಕರಿಸಿ ರಾಜ್ಯದ 5 ಉತ್ತಮ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಗಳನ್ನು, 5 ಶ್ರೇಷ್ಠ ಸಹಕಾರಿ ವ್ಯಕ್ತಿಗಳನ್ನು, ಹಾಗೂ ಕರ್ನಾಟಕ ಸರಕಾರದ 2023ನೇ ಸಾಲಿನ 5 ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಸೌಹಾರ್ದ ಸಹಕಾರಿಗಳನ್ನು ಅಭಿನಂದಿಸಿದರು.

ನಂತರದಲ್ಲಿ ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಒಂದು ಉತ್ತಮ ಆಶಯದೊಂದಿಗೆ ಪ್ರಾರಂಭವಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಸಂಯುಕ್ತ ಸಹಕಾರಿಯ ಮಾರ್ಗದರ್ಶನದಲ್ಲಿ ಉತ್ತಮ ಸಾಧನೆಯನ್ನು ಮಾಡುತ್ತಲಿದೆ. ರಜತ ಮಹೋತ್ಸವದ ಆಚರಣೆಯ ಸಿದ್ಧತೆಯಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಇದು ಆತ್ಮಾವಲೋಕನೆಯ ಪರ್ವಕಾಲ ಇದಾಗಿದೆ. ಸೌಹಾರ್ದ ಸಹಕಾರಿಗಳು ಇನ್ನೂ ಹೆಚ್ಚು ಬೆಳೆಯಬೇಕು. ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಸೌಹಾರ್ದ ಸಹಕಾರಿಗಳು ತಮ್ಮ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಜನರ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಾಮಾನ್ಯ ಸಭೆಯ ಪ್ರತಿನಿಧಿಗಳಿಗೆ ಹಾಗೂ ಪ್ರೇಕ್ಷಕ ಸಹಕಾರಿಗಳಿಗಾಗಿ ಬೆಳಿಗ್ಗೆ ವಿವಿಧ ಕಂಪನಿಗಳಿಂದ ತಂತ್ರಜ್ಞಾನ ಮೇಳದ ವ್ಯವಸ್ಥೆ ಮಾಡಲಾಗಿತ್ತು. ಪ್ರಾರಂಭದಲ್ಲಿ ಉಪಹಾರ ಮತ್ತು ಮಧ್ಯಾಹ್ನ ಭೋಜನ ಹಾಗೂ ಸಂಜೆ ತಿಂಡಿ, ಟೀ/ ಕಾಫಿ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಕ್ಯಾಂಪ್ಕೋ, ಇಫ್ಕೋ, ಕೆ.ಎಂ.ಎಫ್. ಮತ್ತು ಕೆಲವು ಸೌಹಾರ್ದ ಸಹಕಾರಿಗಳು ತಮ್ಮ ಸ್ಟಾಲ್‌ಗಳನ್ನು ಹಾಕಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳ 1785 ಪ್ರತಿನಿಧಿಗಳು, 1500 ಪ್ರೇಕ್ಷಕ ಸಹಕಾರಿಗಳು ಭಾಗವಹಿಸಿದ್ದರು.

---

## - : ಕೃತಜ್ಞತಾ ಸಭೆ : -



ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಎಲ್ಲ ಅಧಿಕೃತ ಕಾರ್ಯಕ್ರಮಗಳು ಮುಗಿದ ನಂತರ ಸಿಬ್ಬಂದಿ ಸಭೆ ನಡೆಸಿದ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಿಬ್ಬಂದಿಯವರುಗಳಿಗೆ ವಹಿಸಿದ ಎಲ್ಲ ವಿಭಾಗಗಳ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸಾಮಾನ್ಯ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಲು ಸಹಕರಿಸಿರುವುದಕ್ಕೆ ಸಿಬ್ಬಂದಿಯವರಿಗೆ ಕೃತಜ್ಞತೆ ಸಲ್ಲಿಸಿದರು.

ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಮಾತನಾಡಿ ತಮಗೆ ವಹಿಸಿರುವ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೇವೆ. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಸಿಬ್ಬಂದಿಯವರು ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೀರಿ ಅದಕ್ಕೆ ಅಭಿನಂದನೆಗಳು. ಕೆಲವು ಲೋಪದೋಷಗಳನ್ನು ಆಕಸ್ಮಿಕವಾಗಿ ಆಗಿವೆ. ಅವುಗಳನ್ನು ಈ ಸಭೆಯಲ್ಲಿ ಪ್ರಸ್ತಾಪಿಸಿ ಮುಂದಿನ ದಿನಗಳಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡುವುದಾಗಿ ತಿಳಿಸಿರುವುದು ಸಂತೋಷ ಹಾಗೂ ಸ್ವಾಗತಾರ್ಹ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ. ಆರ್ . ಪ್ರಸನ್ನಕುಮಾರ್, ನಿರ್ದೇಶಕರುಗಳಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಬಿ.ಎಸ್.ಗುಂಡೂರಾವ್, ಶ್ರೀಮತಿ ಶೈಲಜಾ ತಪಲಿ, ಶ್ರೀಮತಿ ಭಾರತಿ ಜಿ .ಪಾಟೀಲ, ಶ್ರೀ ಸಿ.ಪಿ. ವಿಜಯ್, ಶ್ರೀ ಶ್ರೀಧರ, ಶ್ರೀ ಹೆಚ್. ಜೆ. ಹನುಮಂತ ಶೆಟ್ಟಿ, ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ನಾರಾಯಣಬಾಬು ಡಿ. ಎನ್. ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.

## ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣ ಇವರ ಭೇಟಿ



**ತುಮಕೂರು :** ದಿನಾಂಕ 21–08–2024ರಂದು ಕರ್ನಾಟಕ ಸರ್ಕಾರದ ಮಾನ್ಯ ಸಹಕಾರ ಸಚಿವರಾದ ಶ್ರೀಯುತ ಕೆ.ಎನ್. ರಾಜಣ್ಣರವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಸಿ.ಪಿ. ವಿಜಯ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾನ್ಯ ಸಚಿವರ ನಿವಾಸದಲ್ಲಿ ಭೇಟಿ ಮಾಡಿ ಸನ್ಮಾನಿಸಿ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಆಹ್ವಾನಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.

## ಆಗಸ್ಟ್– 2024 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1 ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು.**

ಅ. ದಿ ಮಧುಗಿರಿ ಟೌನ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮಧುಗಿರಿ (ಟಿಎಮ್‌ಕೆ–0220).

ಆ. ದಿ ಕೊರಟಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕೊರಟಗೆರೆ. (ಟಿಎಮ್‌ಕೆ–0219).

ಇ. ದಿ ಶಿರಾ ಟೌನ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಶಿರಾ (ಟಿಎಮ್‌ಕೆ–0222).

ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ–1997ರ ಪ್ರಕರಣ 48ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ಮಧುಗಿರಿ ಇವರು ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀ ಉಮೇಶ್ ಎ.ಎಸ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ದಿನಾಂಕ 24.06.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**ಈ. ಸುಬೋಧ ಸೌಹಾರ್ದ ಪತ್ತಿನ ಸಹಕಾರಿ ನಿ., ಕುವೆಂಪುನಗರ, ಮೈಸೂರು (ಎಮ್‌ವೈಎಸ್–0074)**

ಸಹಕಾರಿಯು ಕಾರ್ಯಸ್ಥಗಿತಗೊಂಡಿರುವುದರಿಂದ ಸಹಕಾರಿಯನ್ನು ಸಮಾಪನೆಗೊಳಿಸಲು ಶ್ರೀ ಸುರೇಶ್ ಆರ್.ಎಸ್., ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಮೈಸೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ದಿನಾಂಕ 08.07.2024ರಂದು ಮಾನ್ಯ ಸಹಕಾರಿಗಳ ಉಪವಿಭಾಗ–ಮೈಸೂರು ಇವರು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**ಹಾಸನ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿಯಿಂದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಸೀಕೆರೆ, ಅರಕಲಗೂಡು ತಾಲೂಕು ಸೌಹಾರ್ದ ಸಹಕಾರಿಗಳ ಮು.ಕಾ.ನಿ, ರವರಿಗೆ ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ವಿಧಾನ ಮತ್ತು ಕಾರ್ಯಸೂಚಿ ವಿಷಯದ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿನಾಂಕ 17.08.2024 ರಂದು ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಸಂಘ, ಚನ್ನರಾಯಪಟ್ಟಣ ಇಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯ ಉದ್ಘಾಟನೆ ಕಾರ್ಯಕ್ರಮವನ್ನು ಶ್ರೀ ಗುರುಪ್ರಸಾದ್ ಬಂಗೇರ, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಬಿ.ಜಿ.ಎಸ್. ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಮಧುಸೂದನ್ ರವರು ನೆರವೇರಿಸಿದರು. ಪ್ರಾಸ್ತವಿಕವಾಗಿ ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ವ್ಯವಸ್ಥಾಪಕರು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ 17 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಸಂಯುಕ್ತ ಸಹಕಾರಿಯ 2 ಸಿಬ್ಬಂದಿ ಸ್ಥಳೀಯ ಸಹಕಾರಿಯ ಪಿಗ್ಮೀಕಲೆಕ್ಟರ್ 4 ಜನ ಸೇರಿದಂತೆ ಒಟ್ಟು 38 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು :** ದಿನಾಂಕ 31–07–2024ರಂದು ಆನೇಕಲ್ ತಾಲೂಕು ಹಾಗೂ ಸುತ್ತಮುತ್ತಲಿನ ಸೌಹಾರ್ದ ಸಹಕರಿಗಳಿಗೆ ಶ್ರೀ ರಾಮ ಸೌಹಾರ್ದ ಸಹಕಾರಿ ಸಂಘ ನಿ., ಬೆಂಗಳೂರು ಇಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಗಳ ಉಪವಿಧಿ ತಿದ್ದುಪಡಿ, ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ನಡೆಸುವ ಬಗ್ಗೆ ಹಾಗೂ ಈಜಿಪೇ, ಚುನಾವಣಾ ಮಾಹಿತಿ, ಕಲಂ 34ರ ಮಾಹಿತಿ ಸಲ್ಲಿಸುವಿಕೆ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 6 ಸೌಹಾರ್ದ ಸಹಕಾರಿಗಳಿಂದ 9 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ



**ದಾವಣಗೆರೆ :** ದಿನಾಂಕ 05–08–2024ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಬಂಟರ ಭವನ, ಕರಾವಳಿ ಸೌಹಾರ್ದ ಸಹಕಾರಿ ಹಿಂಭಾಗ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್‌ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಭಾಗವಹಿಸಿದ್ದರು.



**ಚಿತ್ರದುರ್ಗ :** ದಿನಾಂಕ 06–08–2024ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಐಶ್ವರ್ಯ ಪೋರ್ಟ್, ಆರ್.ಟಿ.ಓ ಕಚೇರಿ ಹತ್ತಿರ, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 05–08–2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರೊಂದಿಗೆ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಚೇರಿಯಲ್ಲಿ ದಾವಣೆಗೆರೆ ಜಿಲ್ಲೆಯಲ್ಲಿ ಅತ್ಯಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳೊಂದಿಗೆ ಪ್ರಚಲಿತ ವಿದ್ಯಮಾನಗಳ ಕುರಿತು ಸಮಾಲೋಚನಾ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್‌ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಎಮ್. ನಾಗರಾಜ್ ರವರು, ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿರವರು ಉಪಸ್ಥಿತರಿದ್ದರು. 18 ಸೌಹಾರ್ದ ಸಹಕಾರಿಗಳಿಂದ 34 ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ :** ಶಿವಮೊಗ್ಗ ಉಪವಿಭಾಗದ ಸಹಾಯಕ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿರುವ ಮಾನ್ಯ ಶ್ರೀ ಟಿ.ವಿ. ಶ್ರೀನಿವಾಸರವರನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ಜಿ.ಹೆಚ್ ರವರು ದಿನಾಂಕ 01–08–2024ರಂದು ಭೇಟಿ ಮಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸ್ವಾಗತಿಸಿದರು.

ಶಿವಮೊಗ್ಗ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಉಪನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿರುವ ಮಾನ್ಯ ಶ್ರೀ ತೇಜಮೂರ್ತಿರವರನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ಜಿ.ಹೆಚ್ ರವರು ದಿನಾಂಕ 01–08–2024ರಂದು ಭೇಟಿ ಮಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸ್ವಾಗತಿಸಿದರು.

ಶಿವಮೊಗ್ಗ ಜಿಲ್ಲೆಯ ಮಾನ್ಯ ಉಪನಿಬಂಧಕರಾಗಿ ಅಧಿಕಾರ ಸ್ವೀಕರಿಸಿರುವ ಮಾನ್ಯ ಶ್ರೀ ನಾಗಭೂಷಣ ಕಲ್ಮನೆರವರನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ಜಿ.ಹೆಚ್. ರವರು ದಿನಾಂಕ 02–08–2024ರಂದು ಭೇಟಿ ಮಾಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,, ಬೆಂಗಳೂರು ಹಾಗೂ ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸ್ವಾಗತಿಸಿದರು.



**ಬಾಗಲಕೋಟೆ** : ದಿನಾಂಕ 01.08.2024 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ನವನಗರ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿರುತ್ತದೆ. ಸಭೆಯ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ.ಎನ್. ಪಾಟೀಲ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಹಿರಿಯ ಸಹಕಾರಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಆಗಮಿಸಿದ್ದರು.




**ಬೆಳಗಾವಿ** : ದಿನಾಂಕ 02.08.2024 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಗೋಕಾಕ, ಮೂಡಲಗಿ, ಬೈಲಹೊಂಗಲ, ಸವದತ್ತಿ, ಚನ್ನಮ್ಮನ ಕಿತ್ತೂರು, ಯರಗಟ್ಟಿ, ರಾಮದುರ್ಗ ತಾಲ್ಲೂಕು ಮತ್ತು ಹುಕ್ಕೇರಿ ತಾಲ್ಲೂಕಿನ ಯಮಕನಮರಡಿ ಗ್ರಾಮದ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಕೆ.ಪಿ.ಟಿ.ಸಿ.ಎಲ್ ಸಭಾ ಭವನ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಹೆಚ್. ಗಿರಡ್ಡಿ ಹಿರಿಯ ಸಹಕಾರಿಗಳು ಇವರು ಆಗಮಿಸಿದ್ದರು. ವೇದಿಕೆ ಮೇಲೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಉಪನ್ಯಾಸಕರರಾದ ಶ್ರೀ ವೈ.ವಿ. ಗುಂಡುರಾವ, ಸಹಪ್ರಧಾನ ವ್ಯವಸ್ಥಾಪಕರು ನಬಾರ್ಡ (ನಿ) ಇವರು ಉಪಸ್ಥಿತರಿದ್ದರು.




**ಬೆಳಗಾವಿ** : ದಿನಾಂಕ 03.08.2024 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ, ಅಥಣಿ, ರಾಯಭಾಗ, ಹುಕ್ಕೇರಿ ತಾಲೂಕಿನ ಸಂಕೇಶ್ವರ ಭಾಗದ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಶ್ರೀ ಎಂ.ಕೆ. ಕವಟಗಿಮಠ ಕನ್ವೆನ್ಷನ್ ಹಾಲ್, ಹಾಲಟ್ಟಿ– ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಭರತೇಶ ಬನವನೆ ಅಧ್ಯಕ್ಷರು, ಶ್ರೀ ಪಾರ್ಶ್ವನಾಥ ತಿರ್ಥಂಕರ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಶ್ರೀ ಸುಭಾಶ ಕಮಲಾಪುರೆ, ಅಧ್ಯಕ್ಷರು ಶ್ರೀ ಪ್ರಭುದೇವ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಶ್ರೀ ಬಾಬುರಾವ್ ಯಾದವ, ಅಧ್ಯಕ್ಷರು ಶ್ರೀ ಹನುಮಾನ್ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಶ್ರೀ ಬಾಬಾಸಾಹೇಬ ಖೋತ, ಅಧ್ಯಕ್ಷರು, ಶ್ರೀ ಜೈಜಿನೇಂದ್ರ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಶಮನೇವಾಡಿ, ಶ್ರೀ ಸಂಜಯ ನಾಡಗೌಡ, ಅಧ್ಯಕ್ಷರು ಓಂ ಣಮೋಕಾರ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಸಪ್ತಸಾಗರ, ಶ್ರೀ ಧರೇಪ್ಪಾ ಮಿರ್ಜೆ, ಅಧ್ಯಕ್ಷರು, ಶ್ರೀ ಮಹಾಲಿಂಗೇಶ್ವರ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ, ದಿಗ್ಗೇವಾಡಿ, ಇವರು ಆಗಮಿಸಿದ್ದರು. ವೇದಿಕೆ ಮೇಲೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಉಪನ್ಯಾಸಕರರಾದ ಶ್ರೀ ವೈ.ವಿ.ಗುಂಡುರಾವ, ಸಹಪ್ರಧಾನ ವ್ಯವಸ್ಥಾಪಕರು ನಬಾರ್ಡ (ನಿ) ಇವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು ಬೆಳಗಾವಿ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಎಮ್ ಸ್ವಾಗತ ಹಾಗೂ ಶ್ರೀ ಶಿವಕಾಂತ ಎನ್ ವಂದಿಸಿದರು. ಶ್ರೀ ವೈ.ವಿ. ಗುಂಡುರಾವ, ಸಹಪ್ರಧಾನ ವ್ಯವಸ್ಥಾಪಕರು ನಬಾರ್ಡ (ನಿ) ಇವರು ಸಹಕಾರಿಗಳ ಸಮಗ್ರ ಅಭಿವೃದ್ಧಿ ವಿಷಯದ ಕುರಿತು ಉಪನ್ಯಾಸ ನೀಡಿದರು. ಒಟ್ಟು 246 ಸೌಹಾರ್ದ ಸಹಕಾರಿಗಳಿಂದ 763 ಜನ ಭಾಗವಹಿಸಿದ್ದರು.

## ಪ್ರವೇಶ ತರಬೇತಿ



**ಕೊಪ್ಪಳ** : ದಿನಾಂಕ 13.08.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ನವೆಂಬರ್ 2022 ರಿಂದ ಜುಲೈ 2024 ರವರೆಗೆ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಪ್ರವೇಶ ತರಬೇತಿಯನ್ನು ಹೊಟೇಲ್ ಲಲಿತ ಮಹಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ಉದ್ಘಾಟಿಸಿದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಹಾಗೂ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 13.08.2024 ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಹೋಟೆಲ್ ಶ್ರೀ ಗುರು ರೆಸಿಡೆನ್ಸಿ, ಜೆ.ಎಲ್.ಬಿ ರಸ್ತೆ, ದೇವರಾಜ ಮೊಹಲ್ಲಾ, ಮೆಟ್ರೋಪೋಲ್ ಸರ್ಕಲ್ ಹತ್ತಿರ ಮೈಸೂರು. ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮವನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣರಾವ್ ರವರು ಉದ್ಘಾಟಿಸಿದ್ದರು.

"ಕಛೇರಿ ಆಡಳಿತ ಹಾಗೂ ಕಡತಗಳ ನಿರ್ವಹಣೆ" ವಿಷಯದ ಕುರಿತು ಶ್ರೀ ಗುರುನರಸಿಂಹ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸೋಮಯಾಜಿ ಇವರು ಉಪನ್ಯಾಸ ನೀಡಿದರು. ಹಾಗೂ "ಸೌಹಾರ್ದ ಸಹಕಾರಿಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯ ಅಳವಡಿಕೆಯ" ಕುರಿತು ಇಂಡಿಯನ್ ಬ್ಯಾಂಕ್‌ನ ವಲಯ ಪ್ರಬಂಧಕರಾದ ಶ್ರೀ ಅನಿಲ್ ಕುಲಕರ್ಣಿ ರವರು ಮಾಹಿತಿಯನ್ನು ನೀಡಿದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಒಟ್ಟು 49 ಸೌಹಾರ್ದ ಸಹಕಾರಿಗಳಿಂದ 63 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಾಮರಾಜನಗರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ : 27.08.2024ರಂದು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ಹಾಗೂ ಹನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಕರು ಹಾಗೂ ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿಗಳಲ್ಲಿ ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ವಿಧಾನ, ಕಾರ್ಯಸೂಚಿಯ ವಿಷಯದ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಕೊಳ್ಳೇಗಾಲ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶ್ರೀನಿವಾಸ್, ಅಧ್ಯಕ್ಷರು, ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಇವರು ಉದ್ಘಾಟನೆಯನ್ನು ನಡೆಸಿಕೊಟ್ಟರು. ಹಾಗೂ ಪ್ರಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ ಪ್ರಾಂತೀಯ ಅಧಿಕಾರಿ ಇವರು ನುಡಿದರು ಈ ತರಬೇತಿಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ ಉಪನ್ಯಾಸ ನೀಡಿದರು. ಒಟ್ಟು 7 ಸೌಹಾರ್ದ ಸಹಕಾರಿಗಳಿಂದ 14 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ

78ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು:** 78ನೇಯ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿಎ ಇವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡುರಾವ್ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ** : 78ನೇಯ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು 441 ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾ–ರಿಗಳಾದ ಶ್ರೀಮತಿ ರಂಜನಾ ಟಿ. ಪೋಳ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಹಾಗೂ ಬೆಳಗಾವಿಯ ವಿವಿಧ ಹಿರಿಯ ಸಹಕಾರಿಗಳು ಮತ್ತು ಪ್ರಾಂತೀಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 15.08.2024 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೆರಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಎಸ್. ಎಸ್. ಪಾಟೀಲರವರು ಹಾಗೂ ಸ್ಥಳೀಯ ಸಹಕಾರಿಯ ಪ್ರತಿನಿಧಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : 78ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಶ್ರೀ ಹೆಚ್.ವಿ. ರಾಜೀವ್, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಹಾಗೂ ಮಾನ್ಯ ನಿಕಟಪೂರ್ವ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಮತ್ತು ಶ್ರೀ ಪ್ರೋ. ವೈ. ಎಸ್. ಸಿದ್ದೇಗೌಡ, ನಿವೃತ್ತ ಉಪಕುಲಪತಿ, ತುಮಕೂರು ವಿಶ್ವವಿದ್ಯಾನಿಲಯ ನೆರವೇರಿಸಿದರು, ಈ ಕಾರ್ಯಕ್ರಮದಲ್ಲಿ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ಹಾಗೂ ಸ್ಥಳೀಯ ಸಹಕಾರಿಗಳು ಮತ್ತು ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ** : ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ರಾಯಚೂರು** : ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನ್ವಿ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ಯವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭೇಟಿ ನೀಡಿದರು.



**ರಾಯಚೂರು** : ನಾಗಲಾಂಬಿಕಾ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭೇಟಿ ನೀಡಿದರು.



**ರಾಯಚೂರು** : ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ಮಾನವಿ ಈ ಸೌಹಾರ್ದ ಸಹಕಾರಿ ಬ್ಯಾಂಕ್‌ಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯಶೆಟ್ಟಿರವರು, ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

## ಉದ್ಘಾಟನೆ



**ರಾಯಚೂರು** : ದಿನಾಂಕ 14.08.2024 ರಂದು ವಿರುಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ ಈ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮದ ಪಾವನ ಸಾನಿಧ್ಯ ಹಾಗೂ ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಜಗದ್ಗುರು ಪರಮಪೂಜ್ಯ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ವೀರ ಸಿಂಹಾಸನ ಸಂಸ್ಥಾನ ಮಠ, ಸುಕ್ಷೇತ್ರ ಸುತ್ತೂರು ಮೈಸೂರು ಜಿಲ್ಲೆ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಮಠಗಳ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರಾದ ಶ್ರೀ ಶಿವಶರಣಪ್ಪ ಎಸ್ ಸಾಹುಕಾರ ರವರು, ಮಾನವಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರುಗಳಾದ ಶ್ರೀ ರಾಜ ವೇಂಕಟಪ್ಪ ನಾಯಕ, ಶ್ರೀ ಬಸನಗೌಡ ಬ್ಯಾಗವ್ಯಾಟ್‌ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿಯವರು, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಹಾಗೂ ವಿಕಾಸ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರು, ಆರ್.ಕೆ.ಡಿ.ಸಿ.ಸಿ ಬ್ಯಾಂಕ್ ರಾಯಚೂರು ಇದರ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ ತೋರಣದಿನ್ನಿರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಹಾಗೂ ಸ್ಥಳೀಯ ಸಹಕಾರಿಗಳ ಮುಖಂಡರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರು ಹಾಗೂ ಮುಕ್ತಾ ಗುಚ್ಛ ಬೃಹನ್ಮಠ ಕಲ್ಮಠ ಮಾನವಿ ಇದರ ಮಹಾಸ್ವಾಮಿಗಳಾದ ಶ್ರೀ ಷ.ಬ್ರ. ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು. ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮುಖ್ಯ ಅತಿಥಿಗಳ ನುಡಿ ನುಡಿದರು. ನಂತರ ಸಾಮೂಹಿಕ ವಿವಾಹ ಜರುಗಿತು. ಕಾರ್ಯಕ್ರಮದಲ್ಲಿ ಗಣ್ಯಮಾನ್ಯರಿಗೆ ಸನ್ಮಾನಿಸಲಾಯಿತು.

## ದಶಮಾನೋತ್ಸವ ಸಮಾರಂಭ



**ರಾಯಚೂರು ಜಿಲ್ಲೆ :** ದಿನಾಂಕ 18.08.2024 ರಂದು ರಾಯಚೂರು ಜಿಲ್ಲೆಯ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗುರು ಈ ಸಹಕಾರಿಯ ದಶಮಾನೋತ್ಸವ ಸಮಾರಂಭ ಕಾರ್ಯಕ್ರಮ ಲಿಂಗಸೂಗುರು ನಗರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಹಾಗೂ ದಶಮಾನೋತ್ಸವದ ಸಮಾರಂಭದ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಬಸವಜಯಮೃತ್ಯುಂಜಯ ಮಹಾಸ್ವಾಮಿಗಳು, ಪ್ರಥಮ ಜಗದ್ಗುರು ಲಿಂಗಾಯತ ಪಂಚಮಶಾಲಿ ಪೀಠ, ಕೂಡಲ ಸಂಗಮ ಇವರು ಮತ್ತು ವೇದಿಕೆ ಮೇಲೆ ಉಪಸ್ಥಿತರಿದ್ದ ಪರಮಪೂಜ್ಯರು ಹಾಗೂ ಗಣ್ಯಮಾನ್ಯರು ಸಸಿಗೆ ನಿರೇರೆಯುವುದರ ಮೂಲಕ ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸ್ಥಳಿಯ ಮಠಗಳ ಪರಮಪೂಜ್ಯ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಆದೇಶ ಬಿ ಹೇರೂರ ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಚಂದ್ರಶೇಖರ ಸಿ. ಕರಡಕಲ್ ರವರು ಹಾಗೂ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು, ಸಿಬ್ಬಂದಿ ವರ್ಗದವರು, ಸದಸ್ಯರು ಉಪಸ್ಥಿತರಿದ್ದರು. ನಂತರ ಕಾರ್ಯಕ್ರಮ ಉದ್ದೇಶಿಸಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್‌ರವರು ಮಾತಾನಾಡಿದರು. ಸಹಕಾರ ಗೀತೆಯ ಮೂಲಕ ಕಾರ್ಯಕ್ರಮ ಆರಂಭಿಸಿದರು. ಸಹಕಾರಿಯ ವೆಬ್‌ಸೈಟ್‌ನ್ನು ಮಾನ್ಯ ಅಧ್ಯಕ್ಷರು ಉದ್ಘಾಟಿಸಿದರು.

## ರಜತ ಮಹೋತ್ಸವ



**ಮೈಸೂರು :** ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಇದರ ರಜತ ಮಹೋತ್ಸವ ಕಾರ್ಯಕ್ರಮವನ್ನು ಶಾರದಾ ವಿಲಾಸ್ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಕಿರಿಯ ಸ್ವಾಮೀಜಿಯವರು ಹಾಗೂ ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯರು ಉದ್ಘಾಟಿಸಿದರು. ಸಪ್ತರ್ಷಿ ಸವಿ ಸಂಚಿಕೆ ಬಿಡುಗಡೆಯನ್ನು ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಇವರು ಬಿಡುಗಡೆ ಮಾಡಿದರು. ಸಹಕಾರಿಯ ಸದಸ್ಯರಿಗೆ ಮತ್ತು ಆಡಳಿತ ಮಂಡಲಿ ಸದಸ್ಯರಿಗೆ ಅಭಿನಂದನೆಯನ್ನು ಮಾನ್ಯ ಶಾಸಕರಾದ ಶ್ರೀ ಜಿ. ಟಿ. ದೇವೇಗೌಡರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಹಾಗೂ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಎಚ್ ವಿ ರಾಜೀವ್ ರವರು ಭಾಗವಹಿಸಿದರು.



**ಶಿವಮೊಗ್ಗ :** ಸರಸ್ವತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ತೀರ್ಥಹಳ್ಳಿ (ಎಸ್‌ಎಂಜಿ–35)ಯ "ಹದಿನೈದನೇ ಸರ್ವಸದಸ್ಯರ ಮಹಾಸಭೆ" ದಿನಾಂಕ: 25–08–2024ರ ಭಾನುವಾರ ತೀರ್ಥಹಳ್ಳಿಯ ವಿದ್ಯಾಧಿರಾಜ ಸಭಾಗೃಹದಲ್ಲಿ ನಡೆಯಿತು. ಬೆಳಿಗ್ಗೆ 11 ಗಂಟೆಗೆ ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರರವರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಹಕಾರಿಯ ಹಿರಿಯ ಸದಸ್ಯರು ದೀಪ ಬೆಳಗುವುದರ ಮೂಲಕ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ರವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸಂದೇಶ್ ಜವಳಿ ರವರು ಸರ್ವರನ್ನೂ ಸ್ವಾಗತಿಸಿದರು. 2023–24ನೇ ಸಾಲಿನಲ್ಲಿ ಸಹಕಾರಿಯು ರೂ.47,13,050/– ಲಾಭ ಗಳಿಸಿದ್ದು, ಶೇ.15ರಂತೆ ಸದಸ್ಯರಿಗೆ ಲಾಭಾಂಶ ಘೋಷಿಸಲಾಯಿತು.

ಸಹಕಾರಿಯ ಸದಸ್ಯರ ಮಕ್ಕಳಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಸರಸ್ವತಿ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ರವರಿಗೆ ಮಹಾಸಭೆಯಲ್ಲಿ ಗೌರವಿಸಲಾಯಿತು.

## ಎಟಿಎಮ್ ಕೇಂದ್ರ ಹಾಗೂ ಜೆ.ಸಿ.ಆರ್. ಬಡಾವಣೆ ಶಾಖೆ ಉದ್ಘಾಟನೆ



**ಚಿತ್ರದುರ್ಗ :** ದಿನಾಂಕ 06–08–2024ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ., ಚಿತ್ರದುರ್ಗ ಇದರ 5ನೇ ಎಟಿಎಮ್(ATM) ಕೇಂದ್ರ, ಜೆ.ಸಿ.ಆರ್ ಬಡಾವಣೆ ಶಾಖೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇದರ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿರವರು, ಬ್ಯಾಂಕಿನ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರು ಆದ ಶ್ರೀ ರಘುರಾಮರೆಡ್ಡಿರವರು, ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿರವರು, ಬ್ಯಾಂಕಿನ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೆ.ಆರ್. ಮಲ್ಲಿಕಾರ್ಜುನರವರು ಉಪಸ್ಥಿತರಿದ್ದರು.



**ಬೆಂಗಳೂರು :** ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತದ 2023–24ನೇ ಸಾಲಿನ 29ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 28–07–2024 ರಲ್ಲಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್ ಗುಂಡುರಾವ್‌ರವರ ಅಧ್ಯಕ್ಷತೆಯಲ್ಲಿ, ಶ್ರೀ ರಾಮ ಮಂದಿರ, ಎನ್ ಆರ್ ಕಾಲೋನಿ, ಬಸವನಗುಡಿ ರಸ್ತೆ, ಬೆಂಗಳೂರು ಇಲ್ಲಿ ನಡೆಸಲಾಯಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ. 1,42,38,508/–ಗಳನ್ನು ಗಳಿಸಿದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ. 127.48 ಕೋಟಿ ಗಳಾಗಿರುತ್ತದೆ. ಸದಸ್ಯರುಗಳಿಗೆ ಶೇ.13 ಡಿವಿಡೆಂಡ್ ಘೋಷಿಷಲಾಗಿದೆ.

ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಸಲ್ಲಿಸಿರುವ ಪದ್ಮಶ್ರೀ ಪುರಸ್ಕೃತ ಶ್ರೀ ಸೋಮಣ್ಣ, ದೇಶಿ ತಳಿಗಳ ಸಂರಕ್ಷಕರಾದ ಶ್ರೀ ಕಾಳಪ್ಪ, ಹಾಗೂ ಏಷ್ಯನ್ ಪ್ಯಾರಾ ಗೇಮ್ಸ್ ನ ಚಿನ್ನದ ಪದಕ ವಿಜೇತ ಓಟಗಾರ್ತಿಯಾದ ಕು. ರಕ್ಷಿತಾ ರಾಜು ರವರನ್ನು ಆಹ್ವಾನಿಸಿ ಸನ್ಮಾನಿಸಲಾಯಿತು. ಹಾಗೂ ಸಹಕಾರಿಯ ಹಿರಿಯ ಸದಸ್ಯರುಗಳನ್ನು ಮತ್ತು ಸಹಕಾರಿಯ ಸಹಾಯಕರನ್ನು ಸಹ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಮಕ್ಕಳ ನೈಜ ಆಸಕ್ತಿಯನ್ನು ಪೋಷಕರು ಗುರುತಿಸಿ ಅದಕ್ಕೆ ಪೂರಕ ವಾತವಾರಣ ಕಲ್ಪಿಸುವುರೊಟ್ಟಿಗೆ, ಪ್ರೋತ್ಸಾಹ ನೀಡಬೇಕೆಂದು ತಿಳಿಸಿದರು. ಒಟ್ಟಾರೆಯಾಗಿ ಮಕ್ಕಳಿಗಾಗಿ ಆಸ್ತಿ ಮಾಡವ ಬದಲು, ಉತ್ತಮ ಸಂಸ್ಕಾರವಂತ ಮಕ್ಕಳನ್ನು ಬೆಳೆಸುವುದರ ಮೂಲಕ ಹೇಗೆ ಅವರುಗಳನ್ನು ದೇಶಕ್ಕೆ ಆಸ್ತಿಯನ್ನಾಗಿ ಮಾಡಬಹುದೆಂದು ಮನೋಜ್ಞನವಾಗಿ ಮಾತನಾಡಿದ ಡಾ ವೀಣಾ ಬನ್ನಂಜೆಯವರು ನೆರೆದಿದ್ದ ವಿದಾರ್ಥಿಗಳಿಗೆ ಹಾಗೂ ಪೋಷಕರಿಗೆ ಸ್ಫೂರ್ತಿ ತುಂಬಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಉಪಸ್ಥಿತರಿದ್ದರು.



**ಬೆಳಗಾವಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿ., ಯುರಗಟ್ಟಿ ಇದರ 2023–24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 03.09.2024 ರಂದು ನಡೆಯಿತು. ಈ ಸಭೆಯಲ್ಲಿ 2023–24ನೇ ಸಾಲಿನ ಆರ್ಥಿಕ ವರ್ಷದಲ್ಲಿ 2291 ಸದಸ್ಯರನ್ನು ಹೊಂದಿದ್ದು ರೂ. 13,86,300/– ಶೇರು ಬಂಡವಾಳ ಹೊಂದಿದೆ. ರಿಸರ್ವ್ ಫಂಡ್ ರೂ, 72,02,624/–, ಠೇವಣಿಯು ರೂ. 13,09,44,288, ಸಾಲವು ರೂ. 10,09,29,013/– ವಿವಿಧ ಬ್ಯಾಂಕುಗಳಲ್ಲಿ ರೂ. 1,07,68,844/– ಠೇವಣಿ ಇಡಲಾಗಿದೆ. ವ್ಯವಹಾರಕ್ಕಾಗಿ ವಿವಿಧ ಬ್ಯಾಂಕ್‌ಗಳಲ್ಲಿ ರೂ. 2,76,55,701/– ಇರಿಸಿರುತ್ತೇವೆ. ಸಹಕಾರಿಯ ಒಟ್ಟು ವ್ಯವಹಾರ 59,05,64,084/– ಆಗಿರುತ್ತದೆ. ಸಹಕಾರಿಯ ಶಾಖೆಗಳನ್ನು ಹೊಂದಿದೆ. 2023–24ನೇ ಸಾಲಿನಲ್ಲಿ 21,79,990/– ಲಾಭವನ್ನು ಗಳಿಸಿದೆ ಎಂದು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಸಿದ್ರಾಯಜ್ಜನವರು ಕಟಕೋಳ ರವರು ವಾರ್ಷಿಕ ವರದಿಯನ್ನು ಓದಿದರು. ಈ ಸಭೆಯಲ್ಲಿ ವಿವಿಧ ಮಠಾಧೀಶರು, ಸದಸ್ಯರು ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಪವಿತ್ರಾ ಸಿದ್ದಪ್ಪ ಪೂಜೇರ ಹಾಗೂ ಉಪಾಧ್ಯಕ್ಷರಾದ ಶ್ರೀ ತಿಪ್ಪಣ್ಣ ಸಿಂಗಾರಗೋಪ್ಪ ಮತ್ತು ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ** : ದಿನಾಂಕ 31.08.2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ರವರು ದಕ್ಷಿಣ ಕನ್ನಡ ಜಿಲ್ಲೆಯ ಒಡೆಯೂರು ಶ್ರೀ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ ಇದರ ಆಡಳಿತ ಕಛೇರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಸಹಕಾರಿಯ ಅಧ್ಯಕ್ಷರೊಂದಿಗೆ ಚರ್ಚೆ ನಡೆಸಿದರು ಮತ್ತು ಸಹಕಾರಿಯ ಬೆಳವಣಿಗೆಗೆ ಅಗತ್ಯ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು.



**ಬೆಂಗಳೂರು** : ದಿನಾಂಕ 31–08–2024ರಂದು ಜರುಗಿದ ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸಹಕಾರಿ ಬೆಂಗಳೂರು ಇದರ 12ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಯ ಸದಸ್ಯ–ರಿಗೆ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು. ವ್ಯವಸ್ಥಾಪಕರಾದ ಶ್ರೀ ಗಂಗಾರಾಮ್ ರವರು ಉಪಸ್ಥಿತರಿದ್ದರು.



**ಬೆಂಗಳೂರು** : ದಿನಾಂಕ 01–09–2024ರಂದು ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಸಾಮಾನ್ಯ ಸಭೆಯ ಉದ್ಘಾಟನೆಯನ್ನು ದಾವಣಗೆರೆ ಜಿಲ್ಲೆಯ ಮಾಜಿ ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು, ಸಹಕಾರಿಯ ಅಧ್ಯಕ್ರಾದ ಶ್ರೀ ಜಿ. ಎಂ.ಪ್ರಸನ್ನಕುಮಾರ್ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.



ದಿನಾಂಕ 01–09–2024ರಂದು ಜರುಗಿದ ಸಂಕ್ರಾಂತಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ 01–09–2024ರಂದು ಜರುಗಿದ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘ ನಿ, ಮಲೆಬೆನ್ನೂರು, ದಾವಣಗೆರೆ ಸಹಕಾರಿಯ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆಯ ವರದಿಗಳು



**ತುಮಕೂರು :** ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಿವೃತ್ತ ಹವಾಲ್ದಾರ್(ಭಾರತೀಯ ಸೇನೆ) ಶ್ರೀ ನಂಜುಗೌಡ ಹೆಚ್.ಬಿ ಇವರು ಭಾಗವಹಿಸಿ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಇದರ ಅಧ್ಯಕ್ಷರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.

---



**ಮಂಡ್ಯ :** ಮಂಡ್ಯ ಜಿಲ್ಲಾ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ ಮಾಡಲಾಯಿತು.



**ತುಮಕೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಪ್ರಾಂತ ಇದರ ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಕಾರ್ಯಕ್ರಮದಲ್ಲಿ ವಿಠ್ಠಲ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಹಾಗೂ ಸ್ಥಳೀಯರು ಭಾಗವಹಿಸಿದ್ದರು.



78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎ ನಾರಾಯಣಮೂರ್ತಿರವರು ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು. ಉಪಾಧ್ಯಕ್ಷರಾದ ಶ್ರೀ ಎಸ್.ಜಿ. ಗೋಪಾಲ್ ಮತ್ತು ಪ್ರಭಾರ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಈಶ್ವರಯ್ಯ.ಎಸ್ ಹಾಗೂ ನೌಕರ ವೃಂದದವರು ಹಾಜರಿದ್ದರು.

---

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ವತಿಯಿಂದ ದಿನಾಂಕ : 15/08/2024 ನೇಯ ಇಸ್ವಿಯ ಗುರುವಾರ ದಿವಸ ಮುಂಜಾನೆ 8–15 ಘಂಟೆಗೆ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಅಶೋಕ ಪಿ ಮುತ್ತಿನ ಇವರ ಅಮೃತ ಹಸ್ತದಿಂದ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಸಭೆಯಲ್ಲಿ ಸಹಕಾರಿ ಸಂಘದ ಎಲ್ಲಾ ನಿರ್ದೇಶಕರು ಸಿಬ್ಬಂದಿ ವರ್ಗದವರು ಪಿಗ್ಮಿ ಸಂಗ್ರಹಕಾರರು ಮತ್ತು ಸಹಕಾರಿಯ ಸಂಘದ ಠೇವುದಾರರು ಹಿತೈಷಿಗಳು, ಸದಸ್ಯರು ಇತರರು ಭಾಗವಹಿಸಿದ್ದರು ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು  ಸ್ವಾತಂತ್ರ ಸಿಕ್ಕ ಬಗ್ಗೆ ಹಾಗೂ ಸ್ವಾತಂತ್ರ ನಂತರ ಬೆಳವಣಿಗೆ ಕುರಿತು ಮಾತನಾಡಿದರು.



**ಬೀದರ** : ಉಳವಿ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ಸಹಕಾರಿಯ ಆವರಣದಲ್ಲಿ 4ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಉದ್ಘಾಟಿಸಿ, ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ನಿಯಮಗಳ ಕುರಿತು ಮಾಹಿತಿಯನ್ನು ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ಭಾಗವಹಿಸಿ ಸದಸ್ಯರ ಕರ್ತವ್ಯ ಜವಾಬ್ದಾರಿ ಹಾಗೂ ಸಹಕಾರಿಯ ಲಾಭ ವಿಂಗಡಣೆ ಕುರಿತು ಮಾಹಿತಿ ನೀಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಲಲಿತಾ ಶೇರಿಕಾರ ವಹಿಸಿದರು. ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.



**ವಿಜಯಪುರ** : ಇಶಾನಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ ಮಾಡಲಾಯಿತು.



ದಿನಾಂಕ : 15.08.2024ರಂದು ಸಹಕಾರಿಯ ಅಧ್ಯಕ್ಷರ ನೇತೃತ್ವದಲ್ಲಿ 78ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತು. ಸದರಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕೊಡಗು** : ಕೊಡವ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ವಿರಾಜಪೇಟೆ ಸಹಕಾರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ ಮಾಡಲಾಯಿತು.



**ರಾಮನಗರ** : ದಿನಾಂಕ 31–08–2024ರಂದು ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ರಾಜೇಶ್ ಕೆ.ಎಮ್. ರವರು ರಾಮನಗರ ಜಿಲ್ಲಾ ಕೇಂದ್ರದಲ್ಲಿ ನೂತನ ಸಹಕಾರಿಯನ್ನು ಪ್ರಾರಂಭಿಸುವ ಹಿನ್ನಲೆಯಲ್ಲಿ ಪ್ರವರ್ತಕರ ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.



**ಮೈಸೂರು** : ದಿನಾಂಕ 29.08.2024ರಂದು ನಂಜನಗೂಡು ತಾಲೂಕು ಗಾಣಿಗರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ಉದ್ಘಾಟನಾ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರರವರು ಭಾಗವಹಿಸಿದರು. ಸದರಿ ಸಹಕಾರಿಯ ಉದ್ಘಾಟನೆಯನ್ನು ಅಖಿಲ ಕರ್ನಾಟಕ ಗಾಣಿಗರ ಸಂಘದ ಮಾನ್ಯ ಅಧ್ಯಕ್ಷರಾದ ಶ್ರೀ ಎಂ ರಾಜಶೇಖರ್ ಗಾಣಿಗ್ ರವರು ಉದ್ಘಾಟನೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರು ಭಾಗವಹಿಸಿದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಬೆಂಗಳೂರು :** ದಿನಾಂಕ 04–08–2024ರಂದು ಯಶಸ್ವಿನಿ ಸೌಹಾರ್ದ ಸಹಕಾರಿ ಸಂಘ ನಿ, ಬೆಂಗಳೂರು ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭಾಗವಹಿಸಿ ಸಹಕಾರಿಯ ಸದಸ್ಯರನ್ನು ಉದ್ದೇಶಿಸಿ ಸೌಹಾರ್ದ ಸಹಕಾರಿಯ ಕಾಯ್ದೆ ತಿದ್ದುಪಡಿಯ ಕುರಿತು ಮಾಹಿತಿ ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ವೇಣುಗೋಪಾಲ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಭಾಗವಹಿಸಿದ್ದರು.



**ಚಿತ್ರದುರ್ಗ :** ದಿನಾಂಕ 14–08–2024ರಂದು ವೀರಶೈವ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಚಿತ್ರದುರ್ಗ ಈ ಸಹಕಾರಿಯ 27ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ, ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಜಯಪ್ರಕಾಶ್ ರವರು, ಉಪಾಧ್ಯಕ್ಷರಾದ ಶ್ರೀ ಕೆ. ನಾಗೇಶ್ ರವರು ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ದಿನಾಂಕ 14–08–2024ರಂದು ಶ್ರೀ ಸಿರಿವಿಜಯ ಸೌಹಾರ್ದ ಸಹಕಾರಿ ಸಂಘ ನಿ, ಚಿತ್ರದುರ್ಗ ಸಹಕಾರಿಯ ಪ್ರಾರಂಭೋತ್ಸವ ಪೂಜಾ ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್.ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ, ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 24–08–2024ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಎ.ಎಸ್. ಉಮೇಶ್‌ರವರು ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ಸಂಘ ನಿ, ದಾವಣಗೆರೆ ಸಹಕಾರಿಯ 11ನೇ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಡಿ. ನಾಗರಾಜಮೂರ್ತಿ, ಉಪಾಧ್ಯಕ್ಷರಾದ ಶ್ರೀ ಹೆಚ್.ಎಮ್. ಈಶಪ್ರಸಾದ್, ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹರಾದ ಶ್ರೀಮತಿ ಎಸ್.ಸಿ. ಉಮಾದೇವಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು ಗ್ರಾಮಾಂತರ :** ದಿನಾಂಕ 18–08–2024ರಂದು ಮಹಿಳಾ ಸಂಕಲ್ಪ ಸೌಹಾರ್ದ ಸಹಕಾರಿ ನಿ, ಹೊಸಕೋಟೆ, ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾ–ರಿಗಳಾದ ಶ್ರೀ ಶ್ರೀಧರ್ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಯ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




ಉಡುಪಿ : ಸಹಕಾರ ಸಂಘವು ನಿಂತ ನೀರಾಗದೇ ಹರಿಯುವ ನದಿಯಾಗಿ, ನದಿ ಹರಿದು ಪ್ರಗತಿ ಸಾಗರ ಸೇರಬೇಕೆಂಬ ಮಹತ್ವಾಕಾಂಕ್ಷೆಯಲ್ಲಿ ಕಟ್ಟಿದ ಈ ಸಂಸ್ಥೆಯ ಅಭಿವೃದ್ಧಿಯಲ್ಲಿ ಕೈ ಜೋಡಿಸಿದ ಸರ್ವ ಸದಸ್ಯರೂ ಅಭಿನಂದನೀಯರು ಎಂದು ಜನಹಿತ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಉಡುಪಿ ಇದರ ಅಧ್ಯಕ್ಷರಾದ ಶ್ರೀ ಗೋಪಾಲ್ ಯು ರವರು ದಿನಾಂಕ 17.08.2024ರಂದು ಉಡುಪಿಯ ಡಯಾನಾ ಹೋಟೆಲ್ ನ ಸಭಾಂಗಣದಲ್ಲಿ ನಡೆದ ಸೊಸೈಟಿಯ 17ನೇ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. 2023-24ನೇ ಸಾಲಿನ ವರದಿಯನ್ನು ಸಭೆಯಲ್ಲಿ ಮಂಡಿಸಿ ಮುಂಬರುವ ದಿನಗಳಲ್ಲಿ ಸೊಸೈಟಿಗೆ ಲಭ್ಯವಾಗುವ ಮತ್ತು ಸದಸ್ಯರಿಗೆ ಉಪಯೋಗವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸಿ ಅದರ ಪ್ರಯೋಜನವನ್ನು ಸದಸ್ಯರಿಗೆ ತಲುಪಿಸುವ ಕಾರ್ಯಕ್ರಮ ರೂಪಿಸಲು ಮತ್ತು ಯಶಸ್ವಿಯಾಗಲು ಆಡಳಿತ ಮಂಡಳಿ ಮತ್ತು ಸರ್ವ ಸದಸ್ಯರ ಸಂಪೂರ್ಣ ಸಹಕಾರ ಕೋರಿದರು. ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ಪ್ರೋತ್ಸಾಹಧನ ನೀಡುತ್ತಾ ಅವರ ಮುಂದಿನ ಜೀವನಕ್ಕೆ ಶುಭಹಾರೈಸಿದರು. 2023-24ನೇ ಸಾಲಿನ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಿ ಸಂಸ್ಥೆಯು ಗಳಿಸಿದ ಲಾಭವನ್ನು ಸದಸ್ಯರಿಗೆ ಡಿವಿಡೆಂಟ್ ಘೋಷಣೆಯೊಂದಿಗೆ ವಿಂಗಡಿಸಲಾಯಿತು. ಸೊಸೈಟಿಯಲ್ಲಿ ಅತ್ಯುತ್ತಮ ಸಾಧನೆಗೈದ ಶಾಖೆಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ದಿನೇಶ್ ಶೆಟ್ಟಿ ಹೆರ್ಗ, ಆಡಳಿತ ಮಂಡಳಿ ಸದಸ್ಯರುಗಳಾದ ಶ್ರೀ ವೈ ಎಸ್ ಮಡಿವಾಳ್, ಉಪೇಂದ್ರ ನಾಯಕ್, ಸದಾನಂದ ಪ್ರಭು, ಗೋಪಾಲ್ ಸಿ ಮೂಲ್ಯ, ಕೃಷ್ಣ ಎಂ ಸಾಲಿಯಾನ್, ವಿಜಯ ಶೆಟ್ಟಿ, ವಸಂತ ನಾಯ್ಕ್, ಮಂಜುನಾಥ ನಾಯ್ಕ್, ಟಿ ಶಶಿಧರನ್, ಜಗನ್ನಾಥ ಆರ್ ಸಾಲಿಯಾನ್, ಡಾ॥ ಅನ್ವಿತಾ ಉಡುಪಿ, ಕೃತಿಕಾ ಜಿ ಮೂಲ್ಯ ಉಪಸ್ಥಿತರಿದ್ದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ವಿಜಯರವರು ಕಾರ್ಯಕ್ರಮ ನಿರೂಪಿಸಿ, ನಿರ್ದೇಶಕರಾದ ಸದಾನಂದ ಪ್ರಭುರವರು ಧನ್ಯವಾದ ಸಮರ್ಪಿಸಿದರು.



**ದಾವಣಗೆರೆ :** ದಿನಾಂಕ: 18-08-2024 ರಂದು ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ಸಂಘ ನಿ., ದಾವಣಗೆರೆ ಸಹಕಾರಿಯ 4 ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು & ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ. ಹೆಚ್.ಎಸ್ ಮಂಜುನಾಥ್ ರವರು ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಎಂ.ಎಸ್ ಸುನಂದಾದೇವಿ ರವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ.ಹೆಚ್ ಚೇತನ್ ಕುಮಾರ್ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಸಹಕಾರಿಯ 94 ಸದಸ್ಯರು ಭಾಗವಹಿಸಿದ್ದರು.



ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘವು ಪ್ರಸಕ್ತ ವರ್ಷ 1.21 ಕೋಟಿ ರೂ.ಗಳ ನಿವ್ವಳ ಲಾಭಗಳಿಸಿದ್ದು, ಸದಸ್ಯರಿಗೆ ಶೇ.22% ಲಾಭಾಂಶವನ್ನು ಸಹಕಾರಿ ಸಂಘದ ಅಧ್ಯಕ್ಷ ಎಂ.ಲೋಕನಗೌಡ ಘೋಷಣೆ ಮಾಡಿದರು.

ರವಿವಾರ ನಗರದ ವಿವೇರಾ ಗ್ರ್ಯಾಂಡ್ ಹೋಟೇಲ್‌ನಲ್ಲಿ ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘದ 14ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಹಕಾರಿ ಸಂಘವು 89.98 ಲಕ್ಷ ಷೇರು ಬಂಡವಾಳ, 20.07 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದೆ. ಆಡಳಿತ ಮಂಡಳಿ ಸಹಕಾರ, ಸಿಬ್ಬಂದಿ ಪರಿಶ್ರಮದಿಂದ ಸಂಘವು ನಿರೀಕ್ಷೆಗೂ ಬೆಳೆದು ನಿಂತಿದೆ. ಕೇವಲ 14 ವರ್ಷಗಳಲ್ಲಿ ತಾಲೂಕಿನಲ್ಲಿ ಮೂರನೇ ಸ್ಥಾನಕ್ಕೆ ಬಂದು ನಿಂತಿದೆ. ಸಹಕಾರಿ ಸಂಘಕ್ಕೆ ನೂತನ ಕಟ್ಟಡ ಸಹ ಖರೀದಿಸಲಾಗಿದೆ. ಹಣಕಾಸಿನ ವ್ಯವಹಾರದ ಜೊತೆಗೆ ನಮ್ಮ ಸಂಘದ ಸದಸ್ಯರಿಗೆ ಅನುಕೂಲವಾಗುವಂತೆ ಯೋಜನೆಗಳನ್ನು ರೂಪಿಸಿದ್ದೇವೆ ಎಂದರು.

ಸಭೆಯಲ್ಲಿ ಉತ್ತಮ ಗ್ರಾಹಕರನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ನಿರ್ದೇಶಕರಾದ ಸೂಗೂರಯ್ಯ ಸ್ವಾಮಿ, ಹೆಚ್.ಕಲ್ಯಾಣಪ್ಪ ರೌಡಕುಂದಾ,

ಆರ್.ಪಂಪಾಪತಿ ಪಾಟೀಲ್, ಕೆ.ಶರಣಬಸವ ವಕೀಲರು, ರಂಗಮ್ಮ, ಸುನಂದ, ಕಾನೂನು ಸಲಹೆಗಾರ ಬಸವರಾಜಗೌಡ, ಲೆಕ್ಕ ಪರಿಶೋಧಕ ಕೆ.ನಾಗನಗೌಡ, ಆರ್‌ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಶರಣಪ್ಪ, ಯಲಬುರ್ಗಾ ಆರ್‌ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ವೀರೇಶ, ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ಸಿಇಓ ಡಿ.ಬಸವರಾಜ, ಸಹಾಯಕ ವ್ಯವಸ್ಥಾಪಕ ಎನ್.ಬಸವರಾಜ ಅಲಬನೂರು ಸೇರಿದಂತೆ ಸಿಬ್ಬಂದಿ, ಸದಸ್ಯರು ಇದ್ದರು.



**ಸಾಲಿಗ್ರಾಮ:** ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ (ನಿ) ಸಾಲಿಗ್ರಾಮ ಇದರ 14ನೆಯ ವಾರ್ಷಿಕ ಸಾಮಾನ್ಯ ಸಭೆಯು ಸಂಘದ ಆಡಳಿತ ಕಛೇರಿಯಲ್ಲಿ ಸಹಕಾರಿಯ ಅಧ್ಯಕ್ಷ ಆನಂದ ಸಿ. ಕುಂದರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಸ್ಥಾಪಕ ನಿರ್ದೇಶಕರಾಗಿ ಇದು ತನಕ ನಿಸ್ವಾರ್ಥ ಸೇವೆ ಸಲ್ಲಿಸಿ ಇತ್ತೀಚೆಗೆ ನಮ್ಮನ್ನು ಅಗಲಿದ ಡಾ ಸತೀಶ ಪೂಜಾರಿಯವರ ಅಗಲುವಿಕೆಗೆ ಸಭೆಯು ಎರಡು ನಿಮಿಷಗಳ ಮೌನ ಪ್ರಾರ್ಥನೆ ಆಚರಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ವಿಶೇಷ ತೀರ್ಮಾನ ಕೈಗೊಂಡಿತು. ಕಾರ್ಯಕ್ರಮದ ವೀಕ್ಷಣೆ ಬಗ್ಗೆ ವೀಡಿಯೋ ಆಡಿಯೋ ಅಳವಡಿಸಿ ಮೃತರ ಜೀವನ ಶೈಲಿಯ ಚಿತ್ರಣವನ್ನು ಬಿತ್ತ–ರಿಸಲಾಯ್ತು.

ಗತ ವರ್ಷದಲ್ಲಿ ಸದಸ್ಯರಿಂದ ರೂ. 13.50 ಕೋಟಿಗೂ ಮಿಕ್ಕಿ ಠೇವಣಿ ಸಂಗ್ರಹಿಸಿ ರೂ. 12.00 ಕೋಟಿಗೂ ಅಧಿಕ ಸಾಲ ವಿತರಿಸಿದೆ. ಸದಸ್ಯರ ಮನ ವಲಿಸೂವುದರ ಮೂಲಕ ಶೇ. 99.99 ರ ವಸೂಲಿ ಸಾಧಿಸಿದೆ. 2023.24ನೇ ಶೈಕ್ಷಣಿಕ ವರ್ಷದಲ್ಲಿ ಪಿ.ಯು.ಸಿ ಮತ್ತು ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಶಾಲಾವಾರು ವಿಧ್ಯಾರ್ಥಿ ವಿಧ್ಯಾರ್ಥಿನಿಯರು ಮತ್ತು ಸದಸ್ಯರ ಮಕ್ಕಳನ್ನು ಪುರಸ್ಕರಿಸಿ ಅಭಿನಂದಿಸಲಾಯಿತು. ಸಂಘದ ಕಾರ್ಯ ಕ್ಷೇತ್ರದಲ್ಲಿ ಫಲಾಪೇಕ್ಷೆ ಇಲ್ಲದೇ ನಿಸ್ವಾರ್ಥ ಪ್ರಶಂಸನೀಯ ಸೇವೆ ಸಲ್ಲಿಸುತ್ತಿರುವ ಹಿರಿಯ ನಾಗರಿಕರುಗಳಾದ ಶ್ರೀ ಸುಧೀಂದ್ರ ಐತಾಳ ಚಿತ್ರಪಾಡಿ, ಮಂಜುನಾಥ ಗುಂಡ್ಮಿ, ಶ್ರೀ ಜಯರಾಮ ಶೆಟ್ಟಿ ಮಣೂರು, ಶ್ರೀ ವೆಂಕಟರಮಣ ನಾವಡ, ಶ್ರೀಮತಿ ಲಕ್ಷ್ಮಿ ಕಾರ್ಕಡ, ಮತ್ತು ಶ್ರೀಮತಿ ಅಕ್ಕಯ್ಯ ಮಣೂರು ಇವರುಗಳನ್ನು ಗೌರವಿಸಿ ಅಭಿನಂದಿಸಲಾಯಿತು.

ಕಳೆದ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭವನ್ನು ವಿಂಗಡಿಸಿ ಸದಸ್ಯರಿಗೆ ಶೇ. 25ರ ಪಾಲು ಮುನಾಫೆ ನೀಡಲಾಯಿತು. ಕಳೆದ ನಿರಂತರ ಒಂಭತ್ತು ವರ್ಷಗಳಿಂದ ಶೇ. 25ರ ಗರಿಷ್ಟ ಪಾಲು ಮುನಾಫೆ ನೀಡಿ ಪ್ರಾಥಮಿಕ ರಂಗದಲ್ಲಿ ದಾಖಲೆ ನಿರ್ಮಿಸಿದೆ.

ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಘವು ಆರಂಭದಿಂದಲೂ ಪ್ರಜ್ಞಾವಂತ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ, ದಕ್ಷ ಆಡಳಿತ ಮಂಡಳಿಯ ಮಾರ್ಗದರ್ಶನ ಮತ್ತು ನಿಷ್ಠಾವಂತ ಸಿಬಂಧಿಯವರ ಪ್ರಾಮಾಣಿಕ ಸೇವೆಯಿಂದ ಲಾಭದಲ್ಲಿ ಮುನ್ನಡೆಯುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಪ್ರಸ್ತುತ ಸಾಲಿನಲ್ಲಿ ಸಂಘಕ್ಕೆ ಸುಸ್ಸಜ್ಜಿತ ಕಟ್ಟಡ ನಿರ್ಮಿಸಿ ಮುಂದಿನ ಸಾಲಿನಿಂದ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಕಟ್ಟಡದಲ್ಲಿಯೇ ಜರುಗಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು. ಸಂಘದ ವಿವಿಧ ಸೇವೆಗಳ ಸದುಪಯೋಗ ಪಡೆಯುವಂತೆ ಕರೆಯಿತ್ತರು.

ಅಂದಿನ ಸಭೆಯಲ್ಲಿ ಸಂಘದ ಎಲ್ಲಾ ನಿರ್ದೇಶಕರುಗಳು ಸಭಾ ಕಾರ್ಯಸೂಚಿಯಂತೆ ವಿಷಯವನ್ನು ಮಂಡಿಸಿ ವಿವರಣೆಗಳನ್ನು ನೀಡಿ ಅನುಮೋದನೆ ಪಡೆದರು. ಸಭೆಯಲ್ಲಿ ನಿರ್ದೇಶಕರುಗಳಾದ ಶ್ರೀ ಸಂಜೀವ ಜಿ, ಶ್ರೀ ಮಂಜುನಾಥ ಎಸ್.ಕೆ, ಡಾ. ಕೆ ಕೃಷ್ಣ ಕಾಂಚನ್, ಶ್ರೀ. ಕೆ ಶಂಕರ ಬಂಗೇರ, ಶ್ರೀ ವಸಂತ ಶೆಟ್ಟಿ, ಶ್ರೀ ವೈ ಕೃಷ್ಣಮೂರ್ತಿ ಐತಾಳ, ಶ್ರೀಮತಿ ಶಾಂತಾ ಭಟ್ಟ, ಶ್ರೀಮತಿ ನಾಗರತ್ನ ಬಾಯರಿ, ಉಪಸ್ಥಿತರಿದ್ದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಶ್ರೀ. ಜಿ ಎಸ್ ಸೋಮಯಾಜಿಯವರು ಗತ ವರ್ಷದ ವರದಿ ಮಂಡಿಸಿದರು. ಶ್ರೀಮತಿ ಶಾಂತಾ ಭಟ್ಟ ನಿರ್ದೇಶಕಿ ವಂದನಾರ್ಪಣೆಗೈದರು.



**ಮೈಸೂರು :** ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್ ಎಸ್ ಭಾಗವಹಿಸಿರುತ್ತಾರೆ. ಈ ಸಂದರ್ಭದಲ್ಲಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ 18.08.2024ರಂದು ಕುಶಾಲನಗರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್.ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಕೊಡಗು** : ವಿರಾಜಪೇಟೆ ಕೊಡವ ಸೌಹಾರ್ದ ಸಹಕಾರಿ ಸಂಘ, ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್.ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಉಡುಪಿ** : ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಪರ್ಕಳ ಉಡುಪಿ ಇದರ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 25.08.2024 ಭಾನುವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಸುರಕ್ಷಾ ಸಭಾಭವನ ಪರ್ಕಳದಲ್ಲಿ ಪಡೆಯಿತು. ಸಹಕಾರಿಯು 2014 ರಲ್ಲಿ ಪ್ರಾರಂಭವಾಗಿ 12 ವರ್ಷಗಳಿಂದ ವ್ಯವಹಾರವನ್ನು ನಡೆಸುತ್ತಿದೆ. ನಿರ್ದೇಶಕರಾದ ಶ್ರೀ ಕೊರಗಪ್ಪ ಶೆಟ್ಟಿ ಗಾರ್ ಸ್ವಾಗತಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಚ್ ಶೆಟ್ಟಿಗಾರ ಅಧ್ಯಕ್ಷತೆ ವಹಿಸಿದ್ದರು. 23–24ನೇ ಸಾಲಿನ ವಾರ್ಷಿಕ ವರದಿಯನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ರತ್ನಾ ಎಸ್ ಶೆಟ್ಟಿಯವರು ಮಂಡಿಸಿದರು. ಈ ಆರ್ಥಿಕ ವರ್ಷದಲ್ಲಿ ಸಹಕಾರಿಯು ರೂ.13.20 ಲಕ್ಷ ಲಾಭ ಗಳಿಸಿರುತ್ತದೆ. ಸದಸ್ಯರಿಗೆ 10% ಲಾಭಾಂಶ ನೀಡಲು ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಯಿತು. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವ್ಯಾಸಾಂಗದಲ್ಲಿ ಅಧಿಕ ಅಂಕ ಗಳಿಸಿದ 6 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಎಚ್ ಶೆಟ್ಟಿಗಾರ್ ಸಹಕಾರಿಯ ಬೆಳವಣಿಗೆಯ ಕುರಿತು ಮಾತನಾಡಿ ಸದಸ್ಯರ ಸಹಕಾರದಿಂದ ಸಂಸ್ಥೆಯು ಒಳ್ಳೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಇನ್ನು ಮುಂದೆಯೂ ನಿಮ್ಮ ಸಹಕಾರ ನೀಡಿ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಸಹಕಾರ ಬೇಕು ಎಂದು ಹೇಳಿದರು. ಶ್ರೀಮತಿ ಜಯಲಕ್ಷ್ಮಿ ಶೆಟ್ಟಿಗಾರ್ ವಂದನಾರ್ಪಣೆ ಮಾಡಿದರು. ಸಾಮಾನ್ಯ ಸಭೆಗೆ ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿಯ ಅಭಿವೃದ್ಧಿ ಅಧಿಕಾರಿಯಾಗಿರುವ ಶ್ರೀ ವಿಜಯ ಬಿ ಎಸ್ ರವರು ಆಗಮಿಸಿ ಸಹಕಾರಿಯ ಕುರಿತು ಉತ್ತಮ ರೀತಿಯಲ್ಲಿ ಮಾತನಾಡಿದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸಾಮಾನ್ಯ ಸಭೆಗೆ ಸದಸ್ಯರು ಬಂದಿರುವುದು ನೋಡಿ ತುಂಬಾ ಸಂತೋಷವಾಯಿತು. ಸಹಕಾರಿಯು ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ ಮತ್ತು ಇನ್ನು ಮುಂದೆ ಕೂಡಾ ಪ್ರಗತಿ ಸಾಧಿಸಲಿ ಎಂದು ಹಾರೈಸಿದರು.



**ಮಂಡ್ಯ** : ದಿನಾಂಕ : 25.08.2025ರಂದು ಭೈರವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಂಡ್ಯ ಇದರ ವಾರ್ಷಿಕ ಸಾಮಾನ್ಯ ಸಭೆ ಜರುಗಿರು. ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ಇವರು ಭಾಗವಹಿಸಿ, ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.

**ವಿಶ್ವಚೇತನ ಸೌಹಾರ್ದ ಸಹಕಾರಿ ಸಂಘ ನಿ., ಹಿರಿಯೂರು**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಶೇರು ಬಂಡವಾಳ | 58.26 |
| ಠೇವಣಿಳು | 72.91 |
| ನೀಡಿದ ಸಾಲಗಳು | 484.05 |
| ಸುಸ್ತಿ ಸಾಲ | 1.54 |
| ದುಡಿಯುವ ಬಂಡವಾಳ | 599.02 |
| ನಿವ್ವಳ ಲಾಭ | 17.43 |




**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ, ಯಲಹಂಕ ಉಪನಗರ ಇದರ 2023–24ನೇ ಸಾಲಿನ 15ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 25.08.2024 ರಂದು ಭಾನುವಾರ ಡಾ॥ ಬಿ ಆರ್ ಅಂಬೇಡ್ಕರ್ ಭವನ ಯಲಹಂಕ ಉಪನಗರ, ಬೆಂಗಳೂರು–64. ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ ಮುನಿರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹತ್ವದ ಸಭೆಗೆ 1450 ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು. ಸಹಕಾರಿಯು 2023–24 ನೇ ಸಾಲಿನಲ್ಲಿ ರೂ. 2,88,10,558/– (ಎರಡು ಕೋಟಿ ಎಂಬತ್ತೆಂಟು ಲಕ್ಷದ ಹತ್ತು ಸಾವಿರದ ಐದು ನೂರ ಐವತ್ತೆಂಟು ರೂಪಾಯಿ) ಗಳ ನಿವ್ವಳ ಲಾಭಾಂಶವನ್ನು ದಾಖಲಿಸಿದ್ದು, ಇದರಲ್ಲಿ ಷೇರು ಬಂಡವಾಳದ ಮೇಲೆ ಶೇ.12% ರಂತೆ ಡಿವಿಡೆಂಡ್‌ನ್ನು ಘೋಷಿಸಲಾಯಿತು. ಹೆಚ್ಚಿನ ಸದಸ್ಯರು ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ 15ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿದರು.

---



**ಬೆಂಗಳೂರು :** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2023–24ನೇ ಆರ್ಥಿಕ ವರ್ಷದಲ್ಲಿ ರೂ.886.77 ಲಕ್ಷಗಳ ನಿವ್ವಳ ಲಾಭಗಳಿಸಿದ್ದು, ಸದಸ್ಯರ ಷೇರುಗಳಿಗೆ ಶೇ.14 ರಷ್ಟು ಲಾಭಾಂಶವನ್ನು ಭಾನುವಾರ ನಡೆದ 26ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷರಾದ ಸದಾಶಿವರೆಡ್ಡಿರವರು ಘೋಷಿಸಿದರು.

ಆರ್.ಬಿ.ಐ ನಿಯಮಗಳ ಪ್ರಕಾರ ಉತ್ತಮ ಆರ್ಥಿಕ ಮತ್ತು ಆಡಳಿತ ನಿರ್ವಹಣೆ ಮಾನದಂಡಗಳನ್ನು ಪೂರೈಸಿ ಸದೃಢವಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಸಹಕಾರಿ ಬ್ಯಾಂಕುಗಳ ಇತರೆ ರಾಷ್ಟ್ರೀಕೃತ ಬ್ಯಾಂಕುಗಳ ಜೊತೆ ಸರಿ ಸಮಾನವಾಗಿ ನೋಡುವಂತಹ ಸ್ಥಿತಿಗಳನ್ನು ಆರ.ಬಿ.ಐ ಹೊರತಂದಿದೆ ಎಂದು ಹೇಳಿದರು.

ಬ್ಯಾಂಕು 2023–24ನೇ ಸಾಲಿನಲ್ಲಿ ಮರಸೂರು, ಹೆಸರಘಟ್ಟ ಮುಖ್ಯರಸ್ತೆ ಮತ್ತು ಅಮೃತಹಳ್ಳಿಯಲ್ಲಿ ನೂತನ ಶಾಖೆಗಳನ್ನು ತೆರೆದಿದ್ದು, ಈಗ ಒಟ್ಟಾರೆ 8 ಶಾಖೆಗಳನ್ನು ಹೊಂದಲು ಸದಸ್ಯರ ಸಹಕಾರ ಮತ್ತು ಅವರು ಬ್ಯಾಂಕಿನ ಮೇಲೆಯಿರುವ ವಿಶ್ವಾಸವೇ ಕಾರಣ ಎಂದರು.

ಬ್ಯಾಂಕು ಮಾರ್ಚ್ ಅಂತ್ಯಕ್ಕೆ ಠೇವಣಿ ಪ್ರಮಾಣವು ರೂ.419.52 ಕೋಟಿ ಹಾಗೂ ಸಾಲಗಳ ಪ್ರಮಾಣವು ರೂ.286.46 ಕೋಟಿಗಳಷ್ಟಿದ್ದು ಒಟ್ಟಾರೆ ರೂ.705.98 ಕೋಟಿಗಳಷ್ಟು ವಹಿವಾಟು ನಡೆಸಲಾಗಿದೆ. ಬ್ಯಾಂಕಿನ ನಿವ್ವಳ ನಿಷ್ಕ್ರಿಯ ಆಸ್ತಿಗಳು (NPA) ಸತತವಾಗಿ ಎರಡು ವರ್ಷಗಳಿಂದ ಶೂನ್ಯ NPA ಸಾಧನೆ ಮಾಡಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸದಸ್ಯರು ಮತ್ತು ಉತ್ತಮ ಗ್ರಾಹಕರಿಗೆ ಅಭಿನಂದನೆ ಸಲ್ಲಿಸಲಾಯಿತು.

---




**ರಾಯಚೂರು :** ಕೊಲ್ಕತ್ತಾದಲ್ಲಿ ಕರ್ತವ್ಯನಿರತ ವೈದ್ಯೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಿರುವುದನ್ನು ಖಂಡಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ, ರಾಯಚೂರು ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಪದಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ದಿನಾಂಕ 20/08/2024 ರಂದು ಪ್ರತಿಭಟನೆ ನಡೆಸಿದೆವು.

ವೀರಶೈವ ಕಲ್ಯಾಣ ಮಂಟಪದಿಂದ ಸಹಕಾರಿಯ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ಆಗಮಿಸಿ, ಆರೋಪಿಗಳನ್ನ ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸುವಂತೆ ಆಗ್ರಹಿಸಿದ ಮನವಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದೇವೆ.

ಜೀವ ಉಳಿಸುವ ವೈದ್ಯರ ಮೇಲೆಯೇ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಿರುವುದು ಆತಂಕದ ಸಂಗತಿ. ಈ ಘಟನೆಯನ್ನು ತೀವ್ರವಾಗಿ ಖಂಡಿಸಿ ಕಾಲೇಜು ಆಡಳಿತ ಮಂಡಳಿ ಆರಂಭದಲ್ಲಿ ಗಂಭೀರವಾಗಿ ಪರಿಗಣಿಸದೆ ಇರುವುದು ಅಕ್ಷಮ್ಯ ಅಪರಾಧವಾಗಿದೆ. ಅತ್ಯಾಚಾರ ಮಾಡಿ ಕೊಲೆ ಮಾಡಿದ ಬಳಿಕ ಗುಂಪು ಆಸ್ಪತ್ರೆಗೆ ದಾಳಿ ಮಾಡಿ ಪುರಾವೆಗಳನ್ನು ನಾಶಪಡಿಸಿದೆ. ಕೂಡಲೇ ನ್ಯಾಯಾಲಯವು ಹತ್ಯೆಯಾಗಿರುವ ಹೆಣ್ಣು ಮಗಳಿಗೆ ಸೂಕ್ತ ನ್ಯಾಯ ಕೊಡಿಸಬೇಕು ಮತ್ತು ಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದೇವೆ.




**ಪುತ್ತೂರು** : ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯದಾದ್ಯಂತ 19 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 23ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ದಿನಾಂಕ 18–08–2024ನೇ ಆದಿತ್ಯವಾರದಂದು ಒಕ್ಕಲಿಗ ಗೌಡ ಸಮುದಾಯ ಭವನ ತೆಂಕಿಲ ಪುತ್ತೂರು ಇಲ್ಲಿ ನಡೆಯಿತು. ಸಹಕಾ–ರಿಯ ಅಧ್ಯಕ್ಷರು ಮಾತನಾಡುತ್ತಾ ಸಹಕಾರಿಯೂ ಗಣನೀಯ ಪ್ರಗತಿ ಸಾಧಿಸಲು ಕಾರಣೀಕರ್ತರಾದ ಎಲ್ಲಾ ಸದಸ್ಯಬಾಂಧವರಿಗೆ ಅಭಿನಂದನೆ ಸಲ್ಲಿಸಿದರು, ಕಳೆದ ಆರ್ಥಿಕ ವರ್ಷದಲ್ಲಿ ಸಹಕಾರಿಯ ವ್ಯವಹಾರದಲ್ಲಿ ಗಣನೀಯ ಪ್ರಗತಿಯಾಗಿದ್ದು ಇದಕ್ಕೆ ಕಾರಣೀಕರ್ತರಾದ ಸದಸ್ಯರನ್ನು ಅಭಿನಂದಿಸಿದರು. ರಾಜ್ಯದಾದ್ಯಂತ 19 ಶಾಖೆಗಳ ಮೂಲಕ ಸದಸ್ಯರಿಗೆ ಸೇವೆಯನ್ನು ನೀಡುತ್ತಿದೆ. ರಾಜ್ಯ ಸರಕಾರವು ಸಹಕಾರಿಯ ಕಾಯ್ದೆಯ ತಿದ್ದುಪಡಿ ಮಾಡಿದು ಇವುಗಳ ಸಾಧಕ ಬಾದಕ ಗಳ ಬಗ್ಗೆ ಅಧ್ಯಯನ ನಡೆಸಬೇಕಿದೆ ಎಂದರು. 2023 –24ರ ಆರ್ಥಿಕ ವರ್ಷಾಂತ್ಯಕ್ಕೆ ಸಹಕಾ–ರಿಯಲ್ಲಿ 45077 ಸದಸ್ಯರು ರೂ 9.75ಕೋಟಿ ಪಾಲು ಬಂಡವಾಳವನ್ನು ಹೂಡಿರುತ್ತಾರೆ. ಸಹಕಾರಿಯು ರೂ 24.05 ಕೋಟಿ ವಿವಿಧ ನಿಧಿಗಳನ್ನು ಹೊಂದಿ ಸದೃಢವಾಗಿದೆ. ಸಹಕಾರಿಯು ತನ್ನ ಸದಸ್ಯರಿಂದ ರೂ 316.29ಕೋಟಿ ಠೇವಣಾತಿಯನ್ನು ಸಂಗ್ರಹಿಸಿ ರೂ 286.59 ಕೋಟಿ ಸಾಲವನ್ನು ವಿತರಿಸಲಾಗಿದೆ, ಒಟ್ಟು ವ್ಯವಹಾರ ರೂ 602.88ಯಾಗಿದ್ದು ವರದಿ ವರ್ಷದಲ್ಲಿ ರೂ 118.35ಕೋಟಿ ಜಾಸ್ತಿಯಾಗಿದೆ. ರೂ. 5.19 ಕೋಟಿ ನಿವ್ವಳ ಲಾಭ ದಾಖಲಿಸಿದ್ದು ಸದಸ್ಯರಿಗೆ ಶೇ 12 ಡಿವಿಡೆಂಡ್ ನ್ನು ಸಭೆಯಲ್ಲಿ ಘೋಷಿಸಲಾಯಿತು. ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ ರವರು ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳನ್ನು ಮಂಡಿಸಿದರು. ಸಹಕಾರಿಯ ಸದಸ್ಯರುಗಳು ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.

ವೇದಿಕೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು, ನಿರ್ದೇಶಕರಾದ ಶ್ರೀ ದೇವಿಪ್ರಸಾದ್ ಕೆ, ಶ್ರೀ ಜಯರಾಮ ಪಿ ಶ್ರೀ ಕೆ ಹರೀಶ್ ಬೋರ್ಕರ್, ಶ್ರೀ ಹೇಮಂತ ಕುಮಾರ್ ಕೆ ಆರ್ ಶ್ರೀ ಪ್ರಕಾಶ್ಚಂದ್ರ ಪಿ, ಶ್ರೀ ರಮೇಶ್ಚಂದ್ರ ಎಂ, ಶ್ರೀ ರಾಜಗೋಪಾಲ ಬಿ, ಶ್ರೀಮತಿ ದೇವಕಿ ಕೆ, ಶ್ರೀಮತಿ ಸರಸ್ವತಿ ಎನ್, ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ವಸಂತ ಶಂಕರ್, ಶ್ರೀ ವೇದವ್ಯಾಸ ಕೆ, ಕಾರ್ಯಾನುಗುಣ ನಿರ್ದೇಶಕರಾದ ಶ್ರೀ ಶ್ರೀಕಾಂತ ರಾವ್ ವಿ ಡಿ, ಶ್ರೀ ರವೀಶ ಪಿ ಹಾಗೂ ವರದಿ ವರ್ಷದ ಸನದು ಲೆಕ್ಕ ಪರಿಶೋಧಕರಾದ ಸಿ.ಎ ಸುಜಯ ಡಿ ಆಳ್ವರವರು ಉಪಸ್ಥಿತರಿದ್ದರು.

**ಸನ್ಮಾನ :** ಪುತ್ತೂರಿನ ರಾಷ್ಟ್ರೀಯ ಗೇರು ಸಂಶೋದನಾ ಕೇಂದ್ರದಲ್ಲಿ ಸಂಶೋದಿಸಲ್ಪಟ್ಟು ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರಿಂದ ಇತ್ತಿಚಿಗೆ ಲೋಕಾರ್ಪಣೆಗೊಂಡ ನೇತ್ರ ಗಂಗಾ ಗೇರುತಳಿಯ ಸಂಶೋಧನಾ ತಂಡದ ನೇತೃತ್ವ ವಹಿಸಿದ ಸಹಕಾರಿಯ ಸದಸ್ಯರಾದ ಡಾ. ಗಂಗಾಧರ ನಾಯಕ್ ಇವರನ್ನು ಹಾಗೂ ಸಹಕಾರಿಯ ವರದಿ ವರ್ಷದ ಸನದು ಲೆಕ್ಕ ಪರಿಶೋಧಕರಾದ ಸಿ.ಎ ಸುಜಯ ಡಿ ಆಳ್ವರವರನ್ನು ಸನ್ಮಾನಿಸಲಾಯಿತು.

ಸಹಕಾರಿಯ ಹಿರಿಯ ಅಧಿಕಾರಿ ಶ್ರೀಮತಿ ಶ್ರೀರಂಜಿತಾ ಎ ವಿ ಪ್ರಾರ್ಥಿಸಿದರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ ಸ್ವಾಗತಿಸಿ, ವಿಭಾಗೀಯ ವ್ಯವಸ್ಥಾಪಕರಾದ ಶ್ರೀ ಪ್ರೇಮಚಂದ್ರ ನಾಯಕ್ ವಂದಿಸಿದರು. ಹಿರಿಯ ವ್ಯವಸ್ಥಾಪಕರಾದ ಶ್ರೀ ದೇವಿಪ್ರಸಾದ್ ಇವರು ನಿರೂಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಸಾಂಸ್ಕೃತಿಕ ಕಾರ್ಯಕ್ರಮ :** ಮಹಾಸಭೆಯ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪೂರ್ವಾಹ್ನ 9.30ರಿಂದ ಸಹಕಾರಿಯ ಸಿಬ್ಬಂದಿಗಳಿಂದ "ಸ್ವರ ಮಾಧುರ್ಯ" ಸಂಗೀತ ರಸಮಂಜರಿ ಕಾರ್ಯಕ್ರಮವು ನಡೆಯಿತು.

---



**ಬೆಂಗಳೂರು :** ದಿನಾಂಕ 25–08–2024ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಸುಂದರ ರಾಮಶೆಟ್ಟಿ ನಗರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಸುಂದರ ರಾಮಶೆಟ್ಟಿ ನಗರ, ಬೆಂಗಳೂರು ಸಹಕಾರಿಯ 22ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನವೀನ್ ಭಂಡಾರಿ ಮತ್ತು ಉಪಾಧ್ಯಕ್ಷರಾದ ಶ್ರೀ ಉಮಾನಾಥ್ ಶೆಟ್ಟಿ, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

# ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಕೊಂಕಣ್ ಕ್ಯಾಥೊಲಿಕ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಕಾರ್ಕಳ**



ಡಾ ಪೀಟರ್ ಫೆರ್ನಾಂಡಿಸ್
ಅಧ್ಯಕ್ಷರು



ಶ್ರೀ ಜಾರ್ಜ್ ಡೇಸಾ
ಉಪಾಧ್ಯಕ್ಷರು

**ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸೌಹಾರ್ದ ಸಹಕಾರ ಸಂಘ ನಿಯಮಿತ, ಮೈಸೂರು.**



ಶ್ರೀ ಜಗದೀಶ್ ಹೆಬ್ಬಾರ್. ಕೆ
ಅಧ್ಯಕ್ಷರು



ಶ್ರೀ ಅರೂರ್ ವಾಸುದೇವ ರಾವ್
ಉಪಾಧ್ಯಕ್ಷರು

**ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಮಂಡ್ಯ**



ಶ್ರೀ ಗುರುರಾಜ್ ಬಿ.ಟಿ
ಅಧ್ಯಕ್ಷರು



ಶ್ರೀ ಸಿದ್ದಲಿಂಗಯ್ಯ ಎಸ್
ಉಪಾಧ್ಯಕ್ಷರು

**ವಿವೇಕಸಿರಿ ಸೇವಾ ಸೌಹಾರ್ದ ಸಹಕಾರಿ ಸಂಘ, ಗುಂಡ್ಲುಪೇಟೆ ಚಾಮರಾಜನಗರ**



ಶ್ರೀ ಸ್ವಾಮಿ ಎಂ.ಎಸ್
ಅಧ್ಯಕ್ಷರು



ಶ್ರೀ ಬಿ.ಕೆ. ಮಹದೇವಸ್ವಾಮಿ
ಉಪಾಧ್ಯಕ್ಷರು



**ಚಾಮರಾಜನಗರ :** ದಿನಾಂಕ 25–08–2024 ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾ.ನಗರ ಇದರ 9ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ವರ್ತಕರ ಸಂಘದ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪದ್ಮಪ್ರಸಾದ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಉಪಾಧ್ಯಕ್ಷರಾದ ಶ್ರೀ ವೆಂಕಟ ನಾಗಪ್ಪ ಶೆಟ್ಟಿ ರವರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ ಜಿ ಸಂಕೀರ್ತನ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ಸದಸ್ಯರ ಮಕ್ಕಳನ್ನು ನೆನಪಿನ ಕಾಣಿಕೆ & ನಗದು ಮೊತ್ತವನ್ನು ನೀಡಿ ಸನ್ಮಾನಿಸಲಾಯಿತು. ಸಹಕಾರಿಯು 2023–24ನೇ ಸಾಲಿನಲ್ಲಿ ರೂ.27.54 ಲಕ್ಷಗಳ ನಿವ್ವಳ ಲಾಭ ಗಳಿಸಿದ್ದು ಸದಸ್ಯರಿಗೆ ಶೇ.10%ರಷ್ಟು ಡಿವಿಡೆಂಟ್ ಅನ್ನು ನೀಡಲು ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು



**ಕೊಡಗು :** ಸೋಮವಾರಪೇಟೆ ಒಕ್ಕಲಿಗರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸಹಕಾರಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಾಲ ಮರುಪಾವತಿಯಾಗದೇ ಮುಟ್ಟುಗೋಲು ಹಾಕಲಾದ ಸ್ಥಿರಾಸ್ತಿಗಳ ಪಹಣಿಯ ಕಾಲಂ 11 ರಲ್ಲಿ ಸಂಘದ ಹೆಸರಿನಲ್ಲಿ ಹಕ್ಕನ್ನು ನಮೂದಿಸಲು ಬಗ್ಗೆ ಉಡುಪಿ ಜಿಲ್ಲಾಧಿಕಾರಿಗಳ ಆದೇಶ.

DC UDP-14014/86/2021-UDPDC-REVENUE-UDUPI DC

| | |
|---|---|
| ಜಿಲ್ಲಾಧಿಕಾರಿ ಹಾಗೂ<br>ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ<br>ಉಡುಪಿ ಜಿಲ್ಲೆ, "ರಜತಾದ್ರಿ"<br>ಮಣಿಪಾಲ, ಉಡುಪಿ - 576104<br>Email: udupidc@gmail.com | Deputy Commissioner &<br>District Magistrate's Office,<br>Udupi District, " Rajatadri",<br>Manipal, Udupi - 576104<br>Office: 0820-2574924, 2574925 |

( ಕರ್ನಾಟಕ ಸರ್ಕಾರ )

ನಂ: ಆರ್‌ಆರ್‌ಟಿ /ಸಿಆರ್/86/2021 / E 71883 ದಿನಾಂಕ: 09.08.2024

1. ಸಹಾಯಕ ಕಮೀಷನರ್ ,ಕುಂದಾಪುರ
2. ತಹಶೀಲ್ದಾರರು

ಉಡುಪಿ, ಕುಂದಾಪುರ , ಬ್ರಹ್ಮಾವರ, ಬೈಂದೂರು
ಕಾಪು , ಹೆಬ್ರಿ , ಕಾರ್ಕಳ ತಾಲ್ಲೂಕು

ಇವರಿಗೆ

ಮಾನ್ಯರೇ,

ವಿಷಯ: ಸಾಲ ಮರುಪಾವತಿಯಾಗದೇ ಮುಟ್ಟುಗೋಲು ಹಾಕಲಾದ ಸ್ಥಿರಾಸ್ತಿಗಳ ಪಹಣಿಯ ಕಾಲಂ 11 ರಲ್ಲಿ ಸಂಘದ ಹೆಸರಿನಲ್ಲಿ ಹಕ್ಕನ್ನು ನಮೂದಿಸಲು ಕೋರಿರುವ ಬಗ್ಗೆ

ಉಲ್ಲೇಖ : 1. ಮುಖ್ಯ ಕಾರ್ಯನಿರ್ವಹಣಾಧಿಕಾರಿ,ನಾರಾಯಣ ಗುರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ ಬನ್ನಂಜೆ, ಉಡುಪಿ ಇವರ ಮನವಿ ದಿನಾಂಕ : 20.02.2024

2. ಮಹಾ ಪ್ರಬಂಧಕರು, ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ, ಮಂಗಳೂರು ಇವರ ಮನವಿ ದಿನಾಂಕ : 21.03.2024

3. ಪ್ರಧಾನ ವ್ಯವಸ್ಥಾಪಕರು, ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ (ನಿ.) ಸಾಲಿಗ್ರಾಮ ಇವರ ಮನವಿ ಸಂಖ್ಯೆ : ಓಆರ್ 130/24-25 ದಿನಾಂಕ : 02.05.2024

4. ಸಹಕಾರ ಸಂಘಗಳ ಉಪನಿಬಂಧಕರು , ಉಡುಪಿ ಜಿಲ್ಲೆ ಇವರ ವರದಿ ಸಂಖ್ಯೆ ಡಿಆರ್‌ಪಿ/ಉ/ದಾವಾ/ಕಲಂ103/ಸ್ಪಷ್ಟೀಕರಣ-02/2024-25 ದಿನಾಂಕ : 05.08.2024

*** ***

ವಿಷಯಕ್ಕೆ ಸಂಬಂಧಿಸಿ, ಉಲ್ಲೇಖದ ಪತ್ರಗಳಲ್ಲಿ ಸಹಕಾರ ಸಂಘವು ತನ್ನ ಸದಸ್ಯರಿಗೆ ನೀಡಿರುವ ಸಾಲ ಮರುಪಾವತಿಯಾಗದೇ ಇದ್ದ ಸಂದರ್ಭಗಳಲ್ಲಿ ಸಾಲಗಾರರ ವಿರುದ್ಧ ಸಹಕಾರ ನ್ಯಾಯಾಲಯದಲ್ಲಿ ದಾಖಲಿಸಿರುವ ಅಮಲ್ಜಾರಿಗಳಂತೆ ಬಾಕಿದಾರರ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದು , ನ್ಯಾಯಾಲಯದಿಂದ ಹೊರಡಿಸಿರುವ ಮುಟ್ಟುಗೋಲು ಡಿಕ್ರಿ ಆದೇಶದಂತೆ ಪಹಣಿಯಲ್ಲಿ ಸಂಘದ ಹೆಸರಿನಲ್ಲಿ ಹಕ್ಕನ್ನು ನಮೂದಿಸಿ ನೀಡಲು ಕೋರಿರುತ್ತಾರೆ

ಸದ್ರಿ ವಿಚಾರದ ಮರು ಪರಿಶೀಲಿಸಿಕೊಂಡು ವರದಿಯನ್ನು ಸಲ್ಲಿಸುವಂತೆ ತಿಳಿಸಿ ಸಹಕಾರ ಸಂಘಗಳ ಉಪನಿಬಂಧಕರು , ಉಡುಪಿ ಇವರಿಗೆ ತಿಳಿಸಲಾಗಿದ್ದು, ಅದರಂತೆ, ಸದ್ರಿಯವರು ಪರಿಶೀಲಿಸಿ ಉಲ್ಲೇಖ (4) ರಂತೆ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ ಸದ್ರಿಯವರ ವರದಿಯಲ್ಲಿ ಜಿಲ್ಲೆಯ ಸಹಕಾರ ಸಂಘಗಳು ಸಾಲ ನೀಡುವ ಹಂತದಲ್ಲಿಯೇ ಸಂಘದ ಋಣಭಾರವನ್ನು ಪಹಣಿಯಲ್ಲಿ ದಾಖಲು ಮಾಡಲಾಗುತ್ತಿದ್ದು, ನಂತರ ಸಾಲಕ್ಕೆ ಪಡೆದ ಭದ್ರತೆ ಕಡಿಮೆಯಾದಲ್ಲಿ ಅಥವಾ ಹಣದುರುಪಯೋಗ ಸಂದರ್ಭದಲ್ಲಿ ಹಾಗೂ ಸಾಲ ಮರುಪಾವತಿಯಾಗದ ಸಾಲದ ಮೌಲ್ಯ ಭದ್ರತೆ ಪಡೆದ ಆಸ್ತಿಗಿಂತ ಹೆಚ್ಚಾದ ಸಂದರ್ಭದಲ್ಲಿ ಸಾಲಗಾರನ ಇತರೆ ಸ್ವತ್ತಿನ ಮೇಲೆ ಋಣಭಾರ ದಾಖಲು ಮಾಡಲು ಸಹಕಾರ ಸಂಘಗಳಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 103 ರಂತೆ ದಾವಾ ದಾಖಲು ಮಾಡಲು ಅವಕಾಶವಿರುತ್ತದೆ.

17 AUG 2024

ಸ್ವೀಕರಿಸಲಾಗಿದೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 102 ರಂತೆ ರಿಜಿಸ್ಟ್ರಾರನ್ನು ಅಥವಾ ಅವನಿಂದ ಅಧಿಕೃತಗೊಳಿಸಲಾದ ವ್ಯಕ್ತಿಯು ಕೆಲವು ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರುವುದು ಎಂದು ಇದ್ದು ಸಹಕಾರ ಸಂಘಗಳ ನಿಬಂಧಕರು ಅಥವಾ ಈ ಸಂಬಂಧದಲ್ಲಿ ಅವರಿಂದ ಅಧಿಕೃತರಾದ ಯಾರೇ ವ್ಯಕ್ತಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 101 ರಂತೆ ಅವಾರ್ಡಿಗೆ ಅಥವಾ ಆದೇಶಕ್ಕೆ ಮುಂಚೆ ಸ್ವತ್ತಿನ ಜಪ್ತಿ ಆದೇಶ ನೀಡಿದ್ದಲ್ಲಿ ಮತ್ತು ಅಂತಹ ಜಪ್ತಿಯು ಸಕ್ಷಮ ಸಿವಿಲ್ ನ್ಯಾಯಾಲಯದಿಂದ ಮಾಡಲಾದ ಜಪ್ತಿಯಂತೆಯೇ ಪರಿಣಾಮವನ್ನು ಹೊಂದಿರತಕ್ಕದ್ದು ಎಂದು ಇದ್ದು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 103 ರ ಪ್ರಕಾರ ಮಾಡಿದ ಆದೇಶದಂತೆ ಮುಟ್ಟುಗೋಲು ಹಾಕಲಾದ ಸ್ಥಿರಾಸ್ತಿಗಳನ್ನು ಭೂಮಿ ತಂತ್ರಾಂಶದ ಮೂಲಕ ನೇರವಾಗಿ ಪಹಣಿ ಕಾಲಂ 11 ರಲ್ಲಿ ಸಂಘದ ಹೆಸರಿನಲ್ಲಿ ಹಕ್ಕನ್ನು ಸಂಬಂಧಪಟ್ಟ ತಹಶೀಲ್ದಾರರು ದಾಖಲಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಇಂತಹ ಪ್ರಕರಣಗಳು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ತಿಳಿಸಿ ವರದಿಯನ್ನು ನೀಡಿರುತ್ತಾರೆ.

ಆದ್ದರಿಂದ, ಸದ್ರಿಯವರ ವರದಿಯಂತೆ ಸಾಲಗಾರರ ವಿರುದ್ಧ ಸಹಕಾರ ನ್ಯಾಯಾಲಯದಲ್ಲಿ ದಾಖಲಿಸಿರುವ ಅಮಲ್ದಾರಿಗಳಂತೆ ಬಾಕಿದಾರರ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡ ಸಂದರ್ಭದಲ್ಲಿ ನ್ಯಾಯಾಲಯದಿಂದ ಹೊರಡಿಸಿರುವ ಮುಟ್ಟುಗೋಲು ಡಿಕ್ರಿ ಆದೇಶದಂತೆ ಸ್ಥಿರಾಸ್ತಿಗಳನ್ನು ಭೂಮಿ ತಂತ್ರಾಂಶದಲ್ಲಿ ನೇರವಾಗಿ ಪಹಣಿಯ ಕಾಲಂ 11 ರಲ್ಲಿ ಸಂಘದ ಹಕ್ಕನ್ನು ದಾಖಲಿಸುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ

ತಮ್ಮ ವಿಶ್ವಾಸಿ,

Signed by
K Vijaya Kumari
Date: 13-08-2024 07:55:59

(ಡಾ. ಕೆ ವಿದ್ಯಾಕುಮಾರಿ, ಭಾ.ಆ.ಸೇ.)
ಜಿಲ್ಲಾಧಿಕಾರಿ
ಉಡುಪಿ ಜಿಲ್ಲೆ, ಉಡುಪಿ

ಪ್ರತಿ: ಸಹಕಾರ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ - ಎಲ್ಲಾ ಸಹಕಾರ ಸಂಘಗಳ ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ತಿಳಿಸಲಾಗಿದೆ



**ಗದಗ :** ದಿನಾಂಕ 06.08.2024 ರಂದು ಗದುಗಿನ ಪ್ರತಿಷ್ಠಿತ ಸಹಕಾರಿ ಸಂಘಗಳಲ್ಲಿ ಒಂದಾಗಿರುವ ಶಿವಸಂಗಮ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘದ ನಿಯಮಿತದ ನೂತನ ಆಡಳಿತ ಮಂಡಳಿಗೆ 2024–2029ರ ಅವಧಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಿಗೆ ಅವಿರೋಧ ಆಯ್ಕೆ ಜರುಗಿತು.

ಅಧ್ಯಕ್ಷರಾಗಿ ವೀರಯ್ಯ ಶಿವಲಿಂಗಯ್ಯ ಶಿವಕಾಳಿಮಠ, ಉಪಾಧ್ಯಕ್ಷರಾಗಿ ಮಹೇಶ ಗಿರಿಯಪ್ಪ ಗಾಣಿಗೇರ, ನಿರ್ದೇಶಕರಾಗಿ ಪ್ರಶಾಂತ ದೇಸಾಯಿಮಠ, ಮುರಿಗೆಪ್ಪ ಲಿಂಗದಾಳ, ಗಿರಿಯಪ್ಪ ಗಾಣಿಗೇರ, ಕಳಕಪ್ಪ ನಾಗರಾಳ, ಸುರೇಶ ಸರ್ವಿ, ಶ್ರೀಮತಿ ಶೋಭಾ ಶಿವಕಾಳಿಮಠ, ಶ್ರೀಮತಿ ಕವಿತಾ ದೇಸಾಯಿಮಠ, ಶ್ರೀಮತಿ ಗೀತಾ ಪಲ್ಲೇದ, ಶ್ರೀಮತಿ ಸರೋಜಾ ಲಿಂಗದಾಳ ಎಲ್ಲರೂ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ ಎಂದು ಚುನಾವಣಾಧಿಕಾರಿಗಳು ಅಧಿಕೃತವಾಗಿ ಘೋಷಿಸಿ ಅವರಿಗೆ ಪ್ರಮಾಣ ಪತ್ರ ವಿತರಿಸಿ ಅಭಿನಂದಿಸಿದರು.

ಈ ನೂತನ ಆಡಳಿತ ಮಂಡಳಿಯಲ್ಲಿ ಕಳಕಪ್ಪ ತಿಪ್ಪಣ್ಣ ನಾಗರಾಳ ಅವರು ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದನ್ನು ಬಿಟ್ಟರೆ ಉಳಿದವರೆಲ್ಲರೂ ಅದೇ ಸ್ಥಾನದಲ್ಲಿ ಈ ಮೊದಲಿನ ಎರಡು ಅವಧಿಯಲ್ಲಿಯೂ ಸಹ ಅವಿರೋಧವಾಗಿ ಆಯ್ಕೆಯಾಗಿದ್ದರು.

ಚುನಾವಣಾ ರಿಟರ್ನಿಂಗ್ ಅಧಿಕಾರಿಯಾಗಿ ನರಗುಂದ ಸಹಕಾರಿ ಸಂಘಗಳ ಲೆಕ್ಕಪರಿಶೋಧನೆ ಸಹಾಯಕ ನಿರ್ದೇಶಕರಾದ ಶ್ರೀನಿವಾಸ ನಾಗೇಂದ್ರ ಅವರು ಚುನಾವಣೆಯ ಎಲ್ಲ ಪ್ರಕ್ರಿಯೆಗಳನ್ನು ಜರುಗಿಸಿದರು.

ಅವಿರೋಧವಾಗಿ ಆಯ್ಕೆಗೊಂಡ ನೂತನ ಅಧ್ಯಕ್ಷ ವ್ಹಿ.ಎಸ್. ಶಿವಕಾಳಿಮಠ ಹಾಗೂ ಉಪಾಧ್ಯಕ್ಷ ಎಂ.ಜಿ. ಗಾಣಿಗೇರ ಅವರು ಎಲ್ಲ ನಿರ್ದೇಶಕರ ವಿಶ್ವಾಸದೊಂದಿಗೆ, ಸಿಬ್ಬಂದಿಯ ನಿಷ್ಠೆಯ ಕರ್ತವ್ಯ ನಿರ್ವಹಣೆಯೊಂದಿಗೆ ಸಂಸ್ಥೆಯನ್ನು ಇನ್ನೂ ಅಭಿವೃದ್ಧಿಯತ್ತ ಸಾಗಿಸುವ ಭರವಸೆ ನೀಡಿ ಜನತೆಯ ವಿಶ್ವಾಸ ಸಹಕಾರವನ್ನು ಕೋರಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಂ.ಸರ್ವಿ, ವ್ಯವಸ್ಥಾಪಕ ಬಿ.ಎಂ.ಹಳ್ಳಿಕೇರಿ ಸೇರಿದಂತೆ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ನಿಮ್ಮ ಪ್ರಶ್ನೆ**



**ನಮ್ಮ ಉತ್ತರ**

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. –ಸಂಪಾದಕರು

**ಪ್ರಶ್ನೆ : ಶ್ರೀ ಜಗದೀಶ್ ಜೋಶಿ, ಹುಬ್ಬಳ್ಳಿ.**

**ಉತ್ತರ : ಶ್ರೀ ಸಂಜಯ ಕೋರಟಕರ, ಮುಖ್ಯಸ್ಥರು, ಶಾಸನಾತ್ಮಕ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

**ಪ್ರಶ್ನೆ: 1 ಪಂಚಾಯತ ದಾವಾ ಹಾಗೂ ಅಮಲ್ ಬಜಾವಣೆ ಶುಲ್ಕ ಲಾಭ ಹಾನಿಗೆಯೋ ಅಥವಾ ಅಢಾವೆಯಲ್ಲಿ ಬರತಕ್ಕ ತೋರಿಸಬೇಕೋ?**

**ಉತ್ತರ:** ದಾವಾ ಪಂಚಾಯ್ತಿ ಹಾಗೂ ಅಮಲ್ಜಾರಿ ಶುಲ್ಕವನ್ನು ತಾವು ಸಾಲಗಾರನಿಂದ ವಸೂಲಿ ಮಾಡುವುದಾದ್ದಲ್ಲಿ ಇದನ್ನು ಸಾಲದ ಖಾತೆಯಲ್ಲಿ ತೋರಿಸಬೇಕಾಗುತ್ತದೆ. ಇಲ್ಲವಾದಲ್ಲಿ ಲಾಭ ಮತ್ತು ಹಾನಿ ತಖ್ತೆ:ಯಲ್ಲಿ ತೋರಿಸಬೇಕಾಗುತ್ತದೆ.

**ಪ್ರಶ್ನೆ:2 ಉಪವಿಧಿ ತಿದ್ದುಪಡೆ ಮೊದಲು ಒಂದು ಶೇರಿನ ಬೆಲೆ 10/– ನಂತರ 100/– ಹಳೆಯ ಶೇರಿನಂತೆ ರೂ.10/– ರಂತೆ 10 ಶೇರು ಪಡೆಯಲ್ಲಿ ಒಂದು ಪೂರ್ಣ ಶೇರು ಅಂತಾ ಪರಿಗಣಿಸಬಹುದೇ? ಅಥವಾ ಸದರಿ ಹತ್ತು ಶೇರುಗಳು ಅಪೂರ್ಣವೆಂದು ಪರಿಗಣಿಸುವಿರೋ?**

**ಉತ್ತರ:** ಶೇರು ಮೊತ್ತವನ್ನು ಹೊಂದಿರದ ಸದಸ್ಯರಿಗೆ ಬಾಕಿ ಮೊತ್ತವನ್ನು ಅಥವಾ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಸಾಕಷ್ಟು ಅವಕಾಶ ನೀಡತಕ್ಕದು. ಸಾಕಷ್ಟು ಅವಕಾಶ ನೀಡಿದರೂ ಪಾವತಿಸದಿದ್ದಲ್ಲಿ ಅಂತಹ ಸದಸ್ಯರನ್ನು ನಿಯಮಾನುಸಾರ ಕ್ರಮವಿಟ್ಟು ಸದಸ್ಯತ್ವದಿಂದ ಮುಕ್ತಗೊಳಿಸಿ ಅವರ ಶೇರು ಮೊತ್ತವನ್ನು ವಾಪಸ್ಸು ನೀಡತಕ್ಕದು.

**ಪ್ರಶ್ನೆ:3 ಸಂಘದಲ್ಲಿ/ಸಹಕಾರಿಯಲ್ಲಿ ರೂ.21000/– ಅಥವಾ ಮೇಲ್ಪಟ್ಟು ಸಂಬಳ ಪಡೆಯುವಾಗ, ಉಪವಿಧಿಯಲ್ಲಿ ಇರುವಂತೆ ಗರಿಷ್ಠ 2 ತಿಂಗಳ ಬೋನಸ್ಸು ಪಡೆಯಲು ಅರ್ಹರೋ?**

**ಉತ್ತರ:** ಸಹಕಾರಿ ಸಂಘವು ರೂ.21000/–ಕ್ಕಿಂತ ಹೆಚ್ಚಿನ ಸಂಬಳ ನೀಡುತ್ತಿದ್ದರೆ ಉಪವಿಧಿಯಲ್ಲಿರುವಂತೆ ಎರಡು ತಿಂಗಳು ಬೋನಸ್ ಪಡೆಯಲು ಅರ್ಹತೆಯನ್ನು ಹೊಂದಿರುತ್ತಾರೆ.

**ಪ್ರಶ್ನೆ:4 ಒಟ್ಟು ಸಾಲಗಳಲ್ಲಿ ಭದ್ರತಾ ಹಾಗೂ ಅಭದ್ರತಾ ಸಾಲಗಳ ಕಾಯ್ದೆ ಅನುಗುಣವಾಗಿ ಅನುಪಾತ ತಿಳಿಸಿ.**

**ಉತ್ತರ:** ಸೌಹಾರ್ದ ಸಹಕಾರಿಗಳ ಹಿತದೃಷ್ಠಿಯಿಂದ ಆದಷ್ಟು ಭದ್ರತಾ ಸಾಲಗಳನ್ನು ನೀಡುವುದು ಸೂಕ್ತ ಈ ಕುರಿತಂತೆ ಸಂಯುಕ್ತ ಸಹಕಾರಿಯ ದಿನಾಂಕ.01.01.2021ರಂದು ಸೌಹಾರ್ದ ಸಹಕಾರಿಗಳು ನೀಡುವ ಸಾಲಗಳಿಗೆ ಸಂಬಂಧಿಸಿದಂತೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ಹೊರಡಿಸಲಾಗಿದೆ. ಅವುಗಳನ್ನು ಅನುಸರಿಸಿ ಸಾಲಗಳನ್ನು ನೀಡಲು ಸೂಚಿಸಿದೆ.

**ಪ್ರಶ್ನೆ:5 ಸ್ಥಿರಾಸ್ತಿ/ಚರಾಸ್ತಿ ಮಾರಾಟದಿಂದ ಗಳಿಸಿದ್ದು ಬಂಡವಾಳ ಮೀಸಲಿಗೆ ಹಾಕಬೇಕಾ? ಅಥವಾ ಅಕೌಂಟಿಂಗ್ ಸ್ಟ್ಯಾಂಡರ್ಡ 10ರಂತೆ ಲಾಭಹಾನಿಗೆ ಹಾಕಬೇಕಾ?**

**ಉತ್ತರ:** ಸಹಕಾರಿಯ ಸ್ಥಿರಾಸ್ತಿ/ಚರಾಸ್ತಿಯಿಂದ ಗಳಿಸಿರುವ ಮೊತ್ತವನ್ನು "ಕ್ಯಾಪಿಟಲ್ ಗೇನ್" (Capital Gain) ಆಗಿರುತ್ತದೆ. ಇದು ಸಂಸ್ಥೆಗೆ ಲಾಭವಾಗಿರುತ್ತದೆ. ಈ ಹಿನ್ನಲೆಯಲ್ಲಿ ಲಾಭ ಹಾನಿ ತಖ್ತೆ:ಯಲ್ಲಿ ತೋರಿಸಬೇಕು.

**ಪ್ರಶ್ನೆ:6 ಕ.ರಾ.ಸೌ.ಸಂ. ಅಧಿನಿಯಮ 1997ರ ಕಲಂ 21 (ಬಿ), ಕ.ಸ.ಸಂಘ ಅಧಿನಿಯಮ 2014 ಕಲಂ 18 (1)ರ ಒಟ್ಟು ಕ್ರಮಬದ್ಧ ಸದಸ್ಯರ 15% ಸಹಸದಸ್ಯರಿರಬೇಕು. ಇವರಿಗೆ ಸಂಘ/ಸಹಕಾರಿಯಲ್ಲಿ ಎಲ್ಲ ತರಹದ ಅವಕಾಶವಿದ್ದು ಸದಸ್ಯರವರಿಗೆ ಹಾಗೂ ವಿಶೇಷ ಆಹ್ವಾನಿತರಿಗೆ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇದೆಯಾ?**

**ಉತ್ತರ:** ಸಹಸದಸ್ಯರಿಗೆ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

**ಪ್ರಶ್ನೆ:7 ಇತ್ತೀಚಿನ RBI, ಸೊತ್ತೋಲಿಯಂತೆ ಲಾಭಾಂಶ ಸರಿಪಡಿಸುವ ನಿಧಿ ಲಾಭದಲ್ಲಿ ವಿಂಗಡಣೆಯು ತೆಗೆದು ಹಾಕಿದೆ ಇನ್ಮುಂದೆ ಮತ್ತೆ ಲಾಭದಲ್ಲಿ ವಿಂಗಡಣೆ ಮಾಡಬಾರದೆಂದು ಇದೆ. ಸದರವು ಸಹಕಾರಿಗೆ ಸಂಬಂಧ ಇದೆ ಅಥವಾ ಇಲ್ಲವೋ?**

**ಉತ್ತರ:** RBI ನೀಡುವ ಸುತ್ತೋಲೆಗಳು ಪಟ್ಟಣ ಸಹಕಾರಿ ಬ್ಯಾಂಕಗಳಿಗೆ ಮಾತ್ರ ಅನ್ವಯಿಸುತ್ತವೆ. ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 13.09.2024 ರಂದು ಯುವಕರು ಮತ್ತು ಸಹಕಾರ ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರದಲ್ಲಿ ಹಮ್ಮಿಕೊಳ್ಳಲಾಗಿದೆ.
2. ಸೆಪ್ಟೆಂಬರ್ ಮಾಹೆಯ ಕೊನೆಯ ವಾರದಲ್ಲಿ ಯುವಕರು ಮತ್ತು ಸಹಕಾರ ಸಂವಾದ ಕಾರ್ಯಕ್ರಮವನ್ನು ಚಾಣುಕ್ಯ ವಿಶ್ವವಿದ್ಯಾಲಯ ಬೆಂಗಳೂರು ಗ್ರಾಮಾಂತರ ದೇವನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗುವುದು.

# ಸಂಸ್ಥೆಯ ಅಧಿಕಾರಿಗಳು ಮಾಡಿದ ಅವ್ಯವಹಾರಕ್ಕೆ ಚುನಾಯಿತ ಪ್ರತಿನಿಧಿಗಳು ಜವಾಬ್ದಾರರಲ್ಲವೇ? - ಒಂದು ವಿಮರ್ಷೆ



– ಶ್ರೀ ಸಿ.ಎಸ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಇತ್ತೀಚೆಗೆ ಒಬ್ಬ ಸಂಪುಟ ದರ್ಜೆ ಸಚಿವರು ವಿಧಾನ ಸಭೆಯಲ್ಲಿ ಸಂಸ್ಥೆಗಳಲ್ಲಿ ಅಧಿಕಾರಿಗಳು ಮಾಡಿದ ಅವ್ಯವಹಾರಕ್ಕೆ ಚುನಾಯಿತ ಪ್ರತಿನಿಧಿಗಳು ಜವಾಬ್ದಾರಿ ಇಲ್ಲ ಎಂದು ಹೇಳಿಕೆ ನೀಡಿ ಅಚ್ಚರಿ ಮೂಡಿಸಿದರು.

ಇದರಲ್ಲಿ ಚರ್ಚಿಸಬೇಕಾದ ವಿಷಯವೆಂದರೆ, ಒಂದು ಸಂಸ್ಥೆ ನಡೆಸುವಾಗ ಚುನಾಯಿತ ಪ್ರತಿನಿಧಿಗಳ ನೇತೃತ್ವದಲ್ಲಿ – ಆ ಸಂಸ್ಥೆಯ ಅಧಿಕಾರಿಗಳು ಮತ್ತು ನೌಕರರು ಕೂಡಿ ಕಾರ್ಯನಿರ್ವಹಿಸಿದಾಗ ಮಾತ್ರ ಆ ಸಂಸ್ಥೆ ಮೂಲ ಉದ್ದೇಶ ಈಡೇರಿಸಲು ಸಾಧ್ಯ. ತಾತ್ವಿಕ ತೀರ್ಮಾನ ತೆಗೆದುಕೊಳ್ಳುವುದು ಮಂಡಳಿ/ಸಮಿತಿಯ ಕರ್ತವ್ಯ, ಹಕ್ಕು ಮತ್ತು ಜವಾಬ್ದಾರಿ. ಅದನ್ನು ಜಾರಿ ಮಾಡುವುದು ಆ ಸಂಸ್ಥೆಯ ಕಾರ್ಯಾಂಗ. ಇದು ಸರ್ಕಾರಿ ಅಧಿಕಾರಿಗಳಿಗೂ ಅನ್ವಯ. ಅದರಲ್ಲಿ ಪ್ರಮುಖವಾಗಿ ಸರ್ಕಾರದಿಂದ ಪ್ರಾರಂಭಿಸಿದ ಸಂಸ್ಥೆಗಳಲ್ಲಿ ಇದು ನೇರವಾಗಿ ಅನ್ವಯಿಸುತ್ತದೆ.

ಕರ್ನಾಟಕ ವಿಧಾನ ಮಂಡಳ ರೂಪಿಸಿದ ನಿಯಮಗಳಂತೆ ಕಾರ್ಯಾಂಗ ಕೆಲಸ ಮಾಡುತ್ತದೆ. ಕಾರ್ಯಾಂಗ ಎಂದರೆ ಸರಕಾರದ ಮಂತ್ರಿಗಳು ಸೇರುತ್ತಾರೆ. ಸುಮಾರು 25–30 ವರ್ಷಗಳಿಂದೀಚೇಗೆ ಚುನಾಯಿತ ಪ್ರತಿನಿಧಿಗಳಿಗೇ ಕಾರ್ಯಾಂಗಾದ ಕೆಲಸವನ್ನು ಮಾಡುತ್ತಾರೆ. ಇದಕ್ಕೆ ರಾಜಕೀಯ ವ್ಯಕ್ತಿಗಳೇ ಪ್ರಮುಖರಾಗಿರುವುದರಿಂದ ಅದರ ವೃತ್ತಿತ್ವದಿಂದ ಅಧಿಕಾರಿಗಳು ಮತ್ತು ನೌಕರರು ಕಾರ್ಯನಿರ್ವಹಿಸಿದಾಗ ಯಾವುದೇ ತೊಡಕುಬರುವುದಿಲ್ಲ. ಆದರೆ ಚುನಾಯಿತ ಪ್ರತಿನಿಧಿಗಳು ತಮ್ಮ ಚುನಾವಣಾ ವೆಚ್ಚವನ್ನು ಭರಿಸಿಕೊಳ್ಳಲು ಇಂತಹ ಸಂಸ್ಥೆಗಳ ಸಂಪನ್ಮೂಲವನ್ನು ಬಳಸಬಯಸಿದಾಗ, ಅಧಿಕಾರಿಗಳು ಹೇಳಿದಂತೆ ಕೇಳದಿದ್ದರೆ, ಅದರ ಪರಿಣಾಮಾವನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ ಮತ್ತು ಓದಿದ್ದೇವೆ.

ಇಲ್ಲಿ ಪರಿಶೀಲಿಸಬೇಕಾದ/ವಿಮರ್ಷಿಸಬೇಕಾದ ಅಂಶ ವೆಂದರೆ, ಪ್ರತಿಯೊಂದು ಇಲಾಖೆ, ಸಂಸ್ಥೆ, ಸಹಕಾರಿ ಸಂಸ್ಥೆಗಳು ಕೂಡ ವಿಮರ್ಷಿಸುವಾಗ, ಆ ಸಂಸ್ಥೆ ನಡೆಸಿಕೊಂಡು ಹೋಗಲು ನೀತಿ ನಿಯಮಗಳನ್ನು ರೂಪಿಸಿಕೊಂಡಿದೆ. ಆ ನೀತಿಗಳಲ್ಲಿ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಅನುಸರಿಸಬೇಕಾದ ನೀತಿ ಸೇರಿರುತ್ತದೆ. ತಾತ್ವಿಕ ತೀರ್ಮಾನ ತೆಗೆದುಕೊಳ್ಳುವುದು ಚುನಾಯಿತ ಮಂಡಳಿ ಜವಾಬ್ದಾರಿ. ಅದನ್ನು ಜಾರಿ ಮಾಡುವಾಗ ಚುನಾಯಿತ ಪ್ರತಿನಿಧಿಗಳು ಭಾಗಿಯಾಗಬಾರದು. ಆದರೆ ಎಲ್ಲಿ ಪ್ರಜಾ ಪ್ರಭುತ್ವದಡಿ ರಚನೆಯಾದ ಸಂಸ್ಥೆಗಳಲ್ಲಿ ಅಧಿಕಾರಿಗಳನ್ನು ತನ್ನ ನೌಕರರೆಂದು ತಿಳಿದು ಅವರು ಜವಾಬ್ದಾರಿಗೆ ವ್ಯತಿರಿತ್ತವಾಗಿ ತೀರ್ಮಾನ ತೆಗೆದುಕೊಳ್ಳಲು ಪ್ರೇರೇಪಿಸುತ್ತಾರೆ. ಇಲ್ಲವಾದರೆ ಅಂತಹ ಅಧಿಕಾರಿಗಳಿಗೆ ಕಿರುಕುಳ ನೀಡಿ, ತಮ್ಮ ಉದ್ದೇಶ ನೆರವೇರಿಸಿಕೊಳ್ಳುತ್ತಾರೆ. ಅಧಿಕಾರಿಗಳು ತಮ್ಮತನವನ್ನು ವ್ಯಕ್ತಪಡಿಸಿದಾಗ ಅವರು ವ್ಯಯಕ್ತಿಕವಾಗಿ ತಪ್ಪು ಮಾಡುವಂತೆ ಪ್ರೇರೇಪಿಸಿ, ಅವರನ್ನು ಭಾಗಿದಾರರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಅದಕ್ಕೂ ಬಗ್ಗದಿದ್ದರೆ, ಅವರನ್ನು ಇಕ್ಕಟ್ಟಿಗೆ ಸಿಲುಕಿಸಿ ಅಮಾನತ್ತು ಅಥವಾ ವರ್ಗಾವಣೆ ಮಾಡುತ್ತಾರೆ.

ಸಹಕಾರಿ ಸಂಸ್ಥೆಗಳ ಉದಾಹರಣೆ ನೀಡುವುದಾದರೆ, ಚುನಾಯಿತ ಮಂಡಳಿಗೆ, ಆಯ್ಕೆಯಾದ ಮಂಡಳಿ, ಅದರಲ್ಲಿ ಪದಾದಿಕಾರಿಗಳು ಆ ಸಂಸ್ಥೆ ತನ್ನ ಸ್ವಂತ ಆಸ್ತಿ ಎಂದು ಕೆಲಸ ಮಾಡುವುದೆ ಪ್ರವೃತ್ತಿ. ಅದಕ್ಕೆ ನೌಕರರು/ಅಧಿಕಾರಿಗಳು ತಲೆ ಬಾಗಿದರೆ ಮಾತ್ರ ಅವರು ಅದೇ ಸ್ಥಾನದಲ್ಲಿ ಮುಂದುವರಿಯುತ್ತಾರೆ. ಇಲ್ಲವಾದರೆ ಅದರ ಮೇಲೆ ಗೂಬೆಕೂರಿಸಿ, ಅಮಾನತ್ತು ಅಥವಾ ವರ್ಗಾವಣೆ ಆಸ್ತ್ರ ಪ್ರಯೋಗಿಸುತ್ತಾರೆ. ಯಾವುದೇ ಸಂಸ್ಥೆಯಲ್ಲಿ ಅವ್ಯವಹಾರ ನಡೆಯಬೇಕಾದರೆ ಸಾಮಾನ್ಯವಾಗಿ ಒಬ್ಬರಿಂದ ಸಾಧ್ಯವಿಲ್ಲ. ಆ ಸಂಸ್ಥೆಯಲ್ಲಿ ಸಣ್ಣ ಪ್ರಮಾಣದ ಅವ್ಯವಹಾರ ಎಂದರೆ ನಗದು ನಿರ್ವಹಣೆಯಲ್ಲಿ ಅವ್ಯವಹಾರಕ್ಕೆ ಒಬ್ಬ ನೌಕರ ಮಾಡಬಹುದು. ಆದರೆ ಬಹಳ ದಿವಸ ಇದನ್ನು ಮಾಡಲಾಗದು. ಅದನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಮತ್ತೊಬ್ಬರ ಸಹಕಾರ ಅವಶ್ಯಕ. ಇದಕ್ಕೆ ಪೂರಕವಾಗಿ ಒಂದು ಸಾಲ ಕೊಡುವ ಸಂಸ್ಥೆಯಲ್ಲಿ ಅರ್ಜಿದಾರರ ಪರವಾಗಿ ಆ ಸಂಸ್ಥೆಯ ಅಧ್ಯಕ್ಷ ಅಥವಾ ಮಂಡಳಿ ಸದಸ್ಯರು ಅರ್ಹತೆ ಇಲ್ಲದೇ ಇದ್ದರೂ ಮಂಜೂರಿ ಮಾಡಲು ಒತ್ತಡ ಹೇರಿದಾಗ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಭಾಗಿಯಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಜೊತೆಯಾಗಿ ಸೇರಿದರೆ ಮಾತ್ರ ಅಂತಹ ಅವ್ಯವಹಾರ ಮಾಡಲು ಸಾಧ್ಯ. ಆ ಸಂದರ್ಭದಲ್ಲಿ ಒಬ್ಬ ಮಂತ್ರಿ ಹೇಳಿದಂತೆ ಅಧಿಕಾರಿಗಳೇ ಜವಾಬ್ದಾರರು, ಚುನಾಯಿತ ಪ್ರತಿನಿಧಿಗಳು ಅಲ್ಲ ಎಂಬ ಹೇಳಿಕೆ ಸುಳ್ಳಾಗುತ್ತಿದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಒಂದು ಸಹಕಾರಿ ಸಕ್ಕರೆ ಕಾರ್ಖಾನೆಗೆ ಸುಮಾರು ರೂ.200 ಕೋಟಿ ಅವಶ್ಯಕ ಬಂಡವಾಳ ಬೇಕೆಂದು ಭಾವಿಸಿದರೆ, ಆ ಹಣ

ಮಂಜೂರು ಮಾಡುವ ಸಂಸ್ಥೆ – ಮೂಲ ಹಣಕ್ಕೆ ಸ್ಥಾಪನಾ ವೆಚ್ಚವನ್ನು ರೂ.300 ಕೋಟಿ ಮಾಡಿ ಎಂದು ಸೂಚಿಸಿ ರೂ.100/– ಕೋಟಿ ಅವ್ಯವಹಾರದ ಹಣವಾಗಿ ಪರಿವರ್ತಿಸಲಾಗುತ್ತಿದೆ. ಇದಕ್ಕೆ ಪ್ರಮುಖವಾಗಿ ಚುನಾಯಿತ ಪ್ರತಿನಿಧಿಗಳೇ ದೊಡ್ಡ ಪ್ರಮಾಣದ ಭಾಗಿಯಾಗುತ್ತಾರೆ. ಆದರೆ ಅಧಿಕಾರಿಗಳು ಸಹಕಾರಿ ಇಲ್ಲದಿದ್ದರೆ, ಸಾಧ್ಯವಿಲ್ಲವೆಂದು ಮನಗಂಡು ಅವರಿಗೂ ಈ ಸಂಭಾವನೆಯಲ್ಲಿ ಭಾಗಿಯಾಗುವಂತೆ ಮಾಡಿ ಅವ್ಯವಹಾರ ಮಾಡುತ್ತಾರೆ. ಇಲ್ಲವಾದರೆ ಅಂತಹ ಸಾಲ ಮಂಜೂರಿ ಮಾಡಲು ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿ ನಿರ್ಮಾಣ ಮಾಡುತ್ತಾರೆ. ಅಂದರೆ ಚುನಾಯಿತ ಪ್ರತಿನಿಧಿಗಳ ಜೊತೆ ಅಧಿಕಾರಿಗಳ ಕೈಜೊಡಿಸಿದಾಗ ಮಾತ್ರ ಇಂತಹ ದೊಡ್ಡ ಪ್ರಮಾಣದ ಅವ್ಯವಹಾರ ಮಾಡಲು ಸಾಧ್ಯ.

ರಾಜ್ಯ ಸರ್ಕಾರ ಬಹಳ ಹಿಂದೆ ಸರ್ಕಾರಿ ಅಧಿಕಾರಿಗಳಿಗೆ ಒಂದು ಸುತ್ತೋಲೆ ಮೂಲಕ, ಮಂತ್ರಿಗಳು ಅಥವಾ ಮೇಲಧಿಕಾರಿಗಳು ನಿಗದಿ ಪಡಿಸಿದ ನಿಯಮಗಳಂತೆ ಕೆಲಸ ನಿರ್ವಹಿಸಬೇಕು, ಆದರೆ ಯಾವುದೇ ಸಂದರ್ಭದಲ್ಲಿ ಮೇಲಾಧಿಕಾರಿ ಅಥವಾ ಮಂತ್ರಿಗಳು ಇಂತಹ ಕೆಲಸ ಮಾಡಲೇಬೇಕೆಂಬ ನಿರ್ದೇಶನ ನೀಡಿದರೆ, ಅದು ನಿಯಮ ಬಾಹಿರವಾಗಿದ್ದರೆ ಮತ್ತು ಅಂತಹ ನಿರ್ದೇಶನ ಪಾಲಿಸದೇ ಇದ್ದರೆ ಅಧಿದಾರಿ/ಮಂತ್ರಿಗಳಿಗೆ ಸಾರ್ವಜನಿಕರ ಸಮ್ಮುಖದಲ್ಲಿ ಅವಮಾನವಾಗುತ್ತಿದ್ದರೆ, ಅದನ್ನು ಜಾರಿ ಮಾಡುವ ಮೊದಲು ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿ/ಇಲಾಖಾ ಮುಖ್ಯಸ್ಥರಿಗೆ ದೃಡೀಕರಿಸಲು ತತ್‌ಕಾಲ್ ಪತ್ರ ಬರೆದು ಜಾರಿ ಮಾಡತಕ್ಕದೆಂದು ಸೂಚನೆ ಇತ್ತಿಂದು ನನ್ನ ನೆನಪು. ಆದರೆ ಇತ್ತೀಚೆಗೆ ಅಧಿಕಾರಿಗಳು ಮಂತ್ರಿಗಳು ಮೇಲಾಧಿಕಾರಿಗಳ ಸೂಚನೆ ನೀಡಿದ ಕೂಡಲೇ ಜಾರಿ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ಒಂದು ಜಿಲ್ಲಾ ಮಟ್ಟದ ಸಂಸ್ಥೆಯ ಚುನಾವಣೆ ನಿಗದಿಯಾಗಿತ್ತು ಒಂದು ಓಟಿನಿಂದ ಆಯ್ಕೆ ಆಗಲು ಸಾಧ್ಯವಿಲ್ಲವೆಂದು ತಿಳಿದು ಮಂತ್ರಿಗಳಿಂದ ಮೌಖಿಕ ಸೂಚನೆ ಮೊರೆ ಎಂದು ಸೂಚಿಸಿ ಒಬ್ಬ ನಿರ್ದೇಶಕನ್ನು ಕಾರಣ ಕೇಳುವ ನೋಟೀಸ್ ನೀಡದೆ ಅನರ್ಹತೆ ಆದೇಶ ಮಾಡಿದರು. ಆ ಅಧಿಕಾರಿಗೆ, ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪಿನಂತೆ ಸ್ವಾಭಾವಿಕನ್ಯಾಯದಡಿ ನೋಟೀಸ್ ನೀಡದೆ ಅನರ್ಹತೆ ಮಾಡಬಾರದೆಂದು ನಿರ್ದೇಶನ ವಿದ್ದರೂ ಆಂಥ ಆದೇಶ ಮಾಡಿ ಚುನಾವಣೆಯಲ್ಲಿ ಆ ವೃತ್ತಿ ಭಾಗವಹಿಸಿದಂತೆ ಮಾಡಿದರು. ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಅಧಿಕಾರಿಗಳು ಕೆಲಸ ಮಾಡಿದಾಗ, ಅವರಿಗೂ ಅದರಿಂದ ಮುಜುಗರವೆಂದು ತಿಳಿದಿದ್ದರೂ, ಮಾಡದೇ ವಿಧಿ ಇಲ್ಲವಾದರೆ, ಆ ಅಧಿಕಾರಿ ಆ ಸ್ಥಾನದಲ್ಲಿ ಮುಂದುವರಿಯಲಾಗದಂತೆ ಕ್ರಮ ಜರುಗುತ್ತದೆ ಎಂದು ತಿಳಿದಿದೆ.

ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ರದ್ದು ಪಡಿಸಿ, ಆಡಳಿತಾಧಿಕಾರಿ ನೇಮಿಸುವಾಗ, ನೀಡುವ ಕಾರಣ ಕೇಳಿ ನೋಟೀಸ್ ನೀಡಿದಾಗ, ಆಡಳಿತ ಮಂಡಳಿ ಸದಸ್ಯರು ನೀಡುತ್ತಿದ್ದ ಉತ್ತರ, ಅಧಿಕಾರಿಗಳು ಮಾಡಿದ ಅವ್ಯವಹಾರಕ್ಕೆ ತಮ್ಮನ್ನು ಜವಾಬ್ದಾರಿ ಮಾಡಲಾಗದು ಎಂದು ಉತ್ತರ ನೀಡುತ್ತಿದ್ದರು. ಆದರೆ ಆ ಸಂಸ್ಥೆಯ ಅವ್ಯವಹಾರಕ್ಕೆ ಮಂಡಳಿ ಸದಸ್ಯರೇ ಕಾರಣ ಕರ್ತರೆಂದು ತಿಳಿದಿದ್ದರೂ, ಉತ್ತರ ನೀಡುವಾಗ, ತಮ್ಮ ಜವಾಬ್ದಾರಿ ಇಲ್ಲವೆಂದು ಲಿಖಿತ ಹೇಳಿಕೆ ನೀಡಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು.

ಒಂದು ಸಹಕಾರಿ ಸಂಸ್ಥೆ ಕಟ್ಟುವ ಉದ್ದೇಶ ಆ ಸಂಸ್ಥೆ ಸದಸ್ಯರ ಆರ್ಥಿಕ, ಸಮಾಜಿಕ ಭೌತಿಕ ಅಭಿವೃದ್ಧಿಗೆ ರಚಿಸಿಕೊಂಡು ಒಂದು ಸಂಸ್ಥೆ. ಆ ಉದ್ದೇಶ ನೆರವೇರಿಸಲು ಸಂಪನ್ಮೂಲ ಕ್ರೋಡೀಕರಿಸಿ, ಸೇವೆ ಮಾಡಲು ಅಧಿಕಾರಿಗಳ/ನೌಕರರ ಅವಶ್ಯಕತೆ ಇದೆ ಎಂದು ನೇಮಿಸಿಕೊಂಡ ವ್ಯಕ್ತಿಗಳು – ಕಾರ್ಯ್ಯಾಂಗದ ಕೆಲಸ ಮಾಡುತ್ತಾರೆ. ಆದರೆ ಹಲವಾರು ಸಹಕಾರಿ ಸಂಸ್ಥೆಗಳಲ್ಲಿ ಅವರೇ ಮಾಲೀಕರಂತೆ ವರ್ತಿಸುವ ಸಂಸ್ಥೆಗಳು ಕಡಿಮೆ ಏನಿಲ್ಲ, ಅದರೂ ವಿರಳ. ಇದಕ್ಕೆ ಒಂದು ಉದಾಹರಣೆ ಎಂದರ ಒಂದು ಗ್ರಾಮಾಂತರ ಪ್ರದೇಶದ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕ ಸದುದ್ದೇಶದಿಂದ ಆ ಗ್ರಾಮದ ಯಾರೆ ಸದಸ್ಯರು ಹಣಕಾಸಿನ ಅವಶ್ಯಕತೆ ಬಿದ್ದರೆ, ಸಭೆ ತೀರ್ಮಾನ ಆಗುವ ವಿಳಂಬವಾಗಬಾರದೆಂದು, ಅಂತಹ ವ್ಯಕ್ತಿಗೆ ಹಣ ಸಹಾಯ ಮಾಡಿ, ಆ ನಂತರ ಕಾಗದ ಪತ್ರ ಮಾಡಿ ಕೊಡುತ್ತಿದ್ದು. ಅವನ್ನು ಈ ವ್ಯವಹಾರದಲ್ಲಿ, ನಿಸ್ವಾರ್ಥ ಸೇವೆ ಮಾಡಿ ಸದಸ್ಯರ ಪ್ರೀತಿಗೆ ಪಾತ್ರನಾಗದ್ದು. ಆದರೆ ಅಂತಹ ಮುಖ್ಯಕಾರ್ಯನಿರ್ವಾಹಕ ಈಗ ವಿರಳ. ಅದೇ ರೀತಿ ಚುನಾಯಿತ ಪ್ರತಿನಿಧಿ ಸದಸ್ಯರ ಹಿತಾಸಕ್ತಿ ಪೂರಕವಾಗಿ, ಕೆಲಸ ನಿರ್ವಹಿಸಿದ ಅಧ್ಯಕ್ಷರು/ಮಂಡಳಿ ಸದಸ್ಯರಿದ್ದ ಸಹಕಾರ ಸಂಸ್ಥೆಗಳು ಇದ್ದವು. ಈಗ ಅವು ವಿರಳ.

**ಉಪಸಂಹಾರ :**

ಈ ವಿಮರ್ಷೆಯ ಉದ್ದೇಶವೆಂದರೆ ಒಂದು ಸಂಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳ ಜೊತೆ, ಅಧಿಕಾರಿಗಳು ಸಹಕಾರ ನೀಡಿದಾಗ ಮಾತ್ರ ಆ ಸಂಸ್ಥೆ ನಿಸ್ವಾರ್ಥ ಸೇವೆ ನೀಡಲು ಸಾಧ್ಯ. ಇತ್ತೀಚಿನ ದಿನಗಳಲ್ಲಿ ಅಂತಹ ಮಂಡಳಿ/ ಅಧಿಕಾರಿಗಳು ನೋಡಲು ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಎಲ್ಲಾ ಅವ್ಯವಹಾರಗಳನ್ನು ಅಧಿಕಾರಿಗಳೇ ಕಾರಣವೆಂದು ದೂಷಿಸಲಾಗದು.

# ನಿಸ್ವಾರ್ಥ ಪ್ರಾಮಾಣಿಕ ದುಡಿಮೆಯ ಸಾಕರ ಮೂರ್ತಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕರಾಸೌಸಂಸನಿ., ಕಲಬುರಗಿ.



19ನೇ ಶತಮಾನದ ಕೊನೆಯಲ್ಲಿ ಇನ್ನೂ ವಿದ್ಯುತ್ ದೀಪಗಳು ಕಾಣದ ಕಾಲಘಟ್ಟದಲ್ಲಿ ಒಂದು ಸಂಸ್ಥಾನದ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ರಾತ್ರಿ ಸಮಯದಲ್ಲಿ ಕೆಲಸ ಮಾಡುವಾಗ ಎರಡು ಮೇಣದ ಬತ್ತಿಗಳು ಹೊಂದಿರುತ್ತಿದ್ದರು. ಒಂದು ಉರಿಯುತ್ತಿರುವ ಮೇಣದ ಬತ್ತಿ ಅದರ ಪಕ್ಕದಲ್ಲೆ ಅರ್ಧ ಬಳಸಿದ ಉರಿಯದ ಮೇಣದ ಬತ್ತಿ, ಇದನ್ನು ದಿನ ಯಾವಾಗಲೂ ಗಮನಿಸುತಿದ್ದ ಕೆಳ ಅಧಿಕಾರಿಗಳು ಹಾಗೂ ಆತ್ಮಿಯರಿಗೆ ಕುತೂಹಲ ! ಒಂದು ದಿವಸ ಕುತೂಹಲ ತಡೆಯದೆ ಆತ್ಮಿಯರೊಬ್ಬರು ಕೇಳಿದಾಗ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ನೀಡಿದ ಉತ್ತರ ಇವಾಗ ಉರಿಯುತ್ತಿರುವ ಮೇಣದ ಬೆಳಕಿನಲ್ಲಿ ಸಂಸ್ಥಾನ ಕೆಲಸ ಕಾರ್ಯಗಳನ್ನು ಮಾಡುತ್ತೆನೆ. ತದನಂತರ ನಾನು ನನ್ನ ವ್ಯಯಕ್ತಿಕ ಕೆಲಸ ಕಾರ್ಯಗಳು ಮಾಡುವಾಗ ಇನ್ನೊಂದು ಮೆಣದ ಬತ್ತಿ ಉರಿಸುತ್ತೆನೆ. ಅದರಲ್ಲಿ ಏನು ವ್ಯತ್ಯಾಸ ಎರಡು ಮೆಣದ ಬತ್ತಿಗಳು ಸಂಸ್ಥಾನ ನೀಡುತ್ತದೆ ಅಲ್ಲವೆ ? ನೀವು ಉನ್ನತ ಹುದ್ದೆಯಲ್ಲಿ ಇರುವವರು ನಿಮಗೆ ಬೇಕಾದಷ್ಟು ಪಡೆಯಬಹುದು ಅಲ್ಲವೆ ಎಂದು ಮರುಪ್ರಶ್ನೆ ಮಾಡಿದಾಗ, ಸಂಸ್ಥಾನ ಸಂಸ್ಥಾನದ ಕೆಲಸ ಕಾರ್ಯಗಳಿಗೆ ಸಂಬಳ ನೀಡುತ್ತದೆ. ನನ್ನ ವ್ಯಯಕ್ತಿಕ ಕೆಲಸ ಕಾರ್ಯಗಳಿಂದ ಸರಕಾರಕ್ಕೆ ಏನು ಲಾಭ ಆದ್ದರಿಂದ ನನ್ನ ಕೆಲಸ ಕಾರ್ಯಗಳನ್ನು ನನ್ನ ಸಂಬಳದಲ್ಲಿ ಮಾಡಿಕೊಳ್ಳಬೇಕು ಸಂಸ್ಥಾನದ ಹಣದಲ್ಲಿ ಅಲ್ಲ ಎಂದು ಹೇಳಿದವರೆ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ. ಅವರ ನಡುವಳಿಕೆ, ನಿಸ್ವಾರ್ಥ, ಪ್ರಾಮಾಣಿಕ ದುಡಿಮೆ ಇಂದಿನ ಆಡಳಿತ ವ್ಯವಸ್ಥೆಯಲ್ಲಿ ಮಾದರಿಯಾಗಬೇಕು. ಇಂತಹ ಆದರ್ಶ ಚಿಲುಮೆ 102 ವರ್ಷದ ಸ್ವಾರ್ಥಕ ಜೀವನ ನಡೆಸಿ ಇಂದಿಗೂ ನಾಡಿನ ಜನಮಾನಸರಾದವರು.

### ಆರಂಭಿಕ ಜೀವನ ಮತ್ತು ಶಿಕ್ಷಣ :

ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರು ಸೆಪ್ಟೆಂಬರ್ 15, 1861ರಂದು ರಾಜ್ಯದ ಚಿಕ್ಕಬಳ್ಳಾಪೂರ ಜಿಲ್ಲೆಯ ನಂದಿ ಬೆಟ್ಟದ ತಪ್ಪಲಿನಲ್ಲಿರುವ ಮುದ್ದೇನಹಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀನಿವಾಸಶಾಸ್ತ್ರಿ ಸಂಸ್ಕೃತ ವಿದ್ವಾಂಸರು, ತಾಯಿ ವೆಂಕಟಲಕ್ಷ್ಮರವರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಊರಿನ ಸರಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿದರು. ವಿಶ್ವೇಶ್ವರಯ್ಯ ಅವರಿಗೆ ಹದಿನೈದು ವರ್ಷವಾಗಿದ್ದಾಗ ತಂದೆ ತೀರಿಕೊಂಡರು. ತಾಯಿ ಅವರಿವರ ಮನೆಯಲ್ಲಿ ದುಡಿಯುತ್ತ ಮಗನನ್ನು ಸಾಕಿ ಸಲುಹಿದರು. ಸೋದರಮಾವ ಎಷ್‌ರಾಮಯ್ಯನವರ ಸಹಾಯದಿಂದ 1875ರಲ್ಲಿ ಬೆಂಗಳೂರಿಗೆ ಬಂದು ವೆಸ್ಲಿ ಮಿಶನ್ ಹೈಸ್ಕೂಲಗೆ ಸೇರಿದರು. ಒಮ್ಮೆಯಂತೂ ಹಣದ ಮುಗ್ಗಟ್ಟಿನಿಂದ ಎಸ್.ಎಸ್.ಎಲ್.ಸಿ. ಯಲ್ಲಿ ಬೆಂಗಳೂರಿನಿಂದ ಮುದ್ದೇನಹಳ್ಳಿಗೆ 35 ಕಿಲೋಮೀಟರ್ ನಡೆದುಕೊಂಡೇ ಹೋಗಿದರು. ಆದರೆ ಅವರಲ್ಲಿ ಬಡತನಕ್ಕೂ ಬಗ್ಗದ ಜೀವನೋತ್ಸಾಹವಿತ್ತು. ಬಡತನವನ್ನು ಎದುರಿಸಿ ಭವಿಷ್ಯದ ದೃಢ ಸಂಕಲ್ಪದೊಂದಿಗೆ, ಸೇಂಟ್ರಲ್ ಕಾಲೇಜನಲ್ಲಿ ಬಿ.ಎ. ಅಭ್ಯಾಸವನ್ನು ಮನೆ ಪಾಠ ಹೇಳಿಕೊಡುವುದರ ಮುಖಾಂತರ ದೈನಂದಿನ ಖರ್ಚನ್ನು ಹೊಂದಿಸಿಕೊಂಡು 1880ರಲ್ಲಿ ಡಿಸ್ಟಿಂಕ್ಷನ್ ಪಡೆದು ಬಿ.ಎ. ಪದವಿ ಪಾಸು ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರಿಂಗ್ ಕಾಲೇಜು ಇರಲಿಲ್ಲ. ಪುಣೆಯಲ್ಲಿ ಇಂಜಿನಿಯರಿಂಗ ಓದಲು ವಿದ್ಯಾರ್ಥಿ ವೇತನ ಲಭಿಸಿದ್ದರಿಂದ 1881ರಲ್ಲಿ ಇಂಜಿನಿಯರಿಂಗ್ ಸೇರಿದ ವಿಶ್ವೇಶ್ವರಯ್ಯ ಮೂರು ವರ್ಷದ ಕೋರ್ಸನ್ನು ಎರಡು ವರ್ಷ ಆರು ತಿಂಗಳಲ್ಲಿ ಮುಗಿಸಿದರು. ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿದರು. ಉತ್ತಮ ಅಂಕಗಳು ಪಡೆದಿದ್ದರಿಂದ ಜೇಮ್ಸ್ ಬರ್ಕ್ಲಿ ಬಹುಮಾನ ದೊರೆತುದಲ್ಲದೆ, ಬಾಂಬೆ ಪಿಡಬ್ಲ್ಯೂಡಿ ವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಆಗಿ ನೌಕರಿ ದೊರೆಯಿತ್ತು.

ಅವರ ಅಸಾಧಾರಣ ಎಂಜಿನಿಯರಿಂಗ್ ಕೌಶಲ್ಯಗಳು ಮತ್ತು ನವೀನ ಚಿಂತನೆಯು ಶೀಘ್ರದಲ್ಲೇ ಮನ್ನಣೆಯನ್ನು ಗಳಿಸಿತು. ಇದು ಅವರ ಮೇಲ್ವಿಚಾರಣೆಯಲ್ಲಿ ಹಲವಾರು ಮಹತ್ವದ ಯೋಜನೆಗಳಿಗೆ ಕಾರಣವಾಯಿತು.

### ವೃತ್ತಿ ಜೀವನ :

ವಿಶ್ವೇಶ್ವರಯ್ಯ ಅವರು ಬಾಂಬೆಯ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಅವರ ನವೀನ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದರಿಂದ ಅವರನ್ನು ಸನ್ 1899ರಲ್ಲಿ ಭಾರತೀಯ ನೀರಾವರಿ ಆಯೋಗಕ್ಕೆ ಸೇರಿದರು. ಅವರು ಡೆಕ್ಕನ್ ಪ್ರಸ್ಥ ಭೂಮಿಯಲ್ಲಿ ಸಂಕೀರ್ಣವಾದ ನೀರಾವರಿ ವ್ಯವಸ್ಥೆಯನ್ನು ಜಾರಿಗೆ ತಂದರು ಮತ್ತು ಪೇಟೆಂಟ್ ಪಡೆದ ಸ್ವಯಂಚಾಲಿತ ವೇರ್ ವಾಟರ್ ಫ್ಲೆಟಗಳನ್ನು ವಿನ್ಯಾಸಗೊಳಿಸಿದರು. ಈ ಗೇಟಗಳು ಅಣೆಕಟ್ಟಿಗೆ

ಹಾನಿಯಾಗದಂತೆ ನೀರಿನ ಮಟ್ಟವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುತ್ತವೆ. ಅವರ ಯಶಸ್ಸು ಇತರ ಅಣೆಕಟ್ಟುಗಳಲ್ಲಿ ಇದೇ ರೀತಿಯ ವ್ಯವಸ್ಥೆಗಳನ್ನು ಸ್ಥಾಪಿಸಲು ಕಾರಣವಾಯಿತು.

ವಿಶ್ವೇಶ್ವರಯ್ಯ ಅವರು ಅಡೆನ್ನ ಬ್ರಿಟಿಷ್ ವಸಾಹತು (ಇಂದಿನ ಯೆಮೆನ್) ನಲ್ಲಿ ಯಶಸ್ವಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒಳಗೊಂಡಂತೆ ಭಾರತದ ಹೊರಗಿನ ಪ್ರಮುಖ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದರು. ಮುಂಬೈ ಸರಕಾರದ ನೌಕರಿಗೆ 1908ರಲ್ಲಿ ಸ್ವಯಂ ನಿವೃತ್ತಿ ಪಡೆದ ನಂತರ, ಅವರು ಕೈಗಾರಿಕರಣಗೊಂಡ ರಾಷ್ಟ್ರಗಳಿಗೆ ಪ್ರವಾಸ ಮಾಡಿದರು. ಅಲ್ಲಿನ ಅವರ ಅಧ್ಯಯನದ ಪರಿಣಿತಿಯು ಹೈದರಾಬಾದ ಪ್ರವಾಹ ರಕ್ಷಣೆಯನ್ನು ಅಭಿವೃದ್ಧಿಪಡಿಸಲು ಮತ್ತು ವಿಶಾಖಪಟ್ಟಣಂ ಬಂದರನ್ನು ಸಮುದ್ರ ಸವೆತದಿಂದ ರಕ್ಷಿಸಲು ಸಹಕಾರಿಯಾಯಿತ್ತು. 1909ರಲ್ಲಿ ಅವರು ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಆಗಿ ನೇಮಕಗೊಂಡರು. ಅಲ್ಲಿ ಅವರು ಕೃಷ್ಣರಾಜ ಸಾಗರ ಅಣೆಕಟ್ಟಿನಂತಹ ಮಹತ್ವದ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಿದರು.

ಅವರು 1912 ರಿಂದ 1918 ರವರೆಗೆ ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸಿದರು. ಅವರ ಅಧಿಕಾರಾವಧಿಯಲ್ಲಿ ಕಾರ್ಖಾನೆಗಳು, ಸಂಶೋಧನಾ ಪ್ರಯೋಗಾಲಯಗಳು ಮತ್ತು ಶೈಕ್ಷಣಿಕ, ಸಾಮಾಜಿಕ ಸೌಲಭ್ಯಗಳನ್ನು ಒಳಗೊಂಡಂತೆ ವಿವಿಧ ಕೈಗಾರಿಕಾ ಉದ್ಯಮಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.

**ಮೈಸೂರು ಸಂಸ್ಥಾನಗಳಲ್ಲಿ ಕೈಗೊಂಡ ಕಾರ್ಯಗಳು :**

ಕೃಷ್ಣರಾಜ ಸಾಗರ ಅಣೆಕಟ್ಟು (ಕೆಆರ್ಎಸ್ ಅಣೆಕಟ್ಟು): ಕರ್ನಾಟಕದ ಮಂಡ್ಯದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣದಲ್ಲಿ ವಿಶ್ವೇಶ್ವರಯ್ಯ ಪ್ರಮುಖ ಪಾತ್ರ ವಹಿಸಿದ್ದರು. ಈ ಅಣೆಕಟ್ಟು ಪ್ರಮುಖ ನೀರಾವರಿ ಯೋಜನೆಯಾಗಿ ಮಾತ್ರವಲ್ಲದೆ ಶುಷ್ಕ ಪ್ರದೇಶಗಳನ್ನು ಫಲವತ್ತಾದ ಕೃಷಿ ಭೂಮಿಯಾಗಿ ಪರಿವರ್ತಿಸಲು ಸಹಾಯ ಮಾಡಿತ್ತು. ಇಂದು ಬೆಂಗಳೂರಿಗೆ ಕುಡಿಯುವ ನೀರಿನ ಸರಬರಾಜಿಗೆ ಸಹಕಾರಿಯಾಗಿದೆ.

ಮೈಸೂರು ಸ್ಟೇಟ್ ರೈಲ್ವೆ: ಮೈಸೂರಿನ ದಿವಾನರಾಗಿ ವಿಶ್ವೇಶ್ವರಯ್ಯ ಅವರು ಮೈಸೂರು ಸ್ಟೇಟ್ ರೈಲ್ವೆ ಅಭಿವೃದ್ಧಿಯಲ್ಲಿ ಕೆಲಸ ಮಾಡಿದರು ಮತ್ತು ವಿವಿಧ ರೈಲು ಮಾರ್ಗಗಳ ನಿರ್ಮಾಣವನ್ನು ಮೇಲ್ವಿಚಾರಣೆ ಮಾಡಿದರು. ಸುಧಾರಿತ ಸಂಪರ್ಕ ಮತ್ತು ಸಾರಿಗೆಗೆ ಕೊಡುಗೆ ನೀಡಿದರು.

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾಮಗಾರಿಗಳು: ಕರ್ನಾಟಕದಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾಮಗಾರಿಯ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಈ ಪ್ರದೇಶದಲ್ಲಿ ಕೈಗಾರಿಕೀಕರಣಕ್ಕೆ ಕೊಡುಗೆ ನೀಡಿದರು.

ಬೆಂಗಳೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು: 1917ರಲ್ಲಿ ವಿಶ್ವೇಶ್ವರಯ್ಯ ಅವರು ಬೆಂಗಳೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು. (ಈಗ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್) ಇದು ಭಾರತದಲ್ಲಿ ಎಂಜಿನಿಯರಿಂಗ್ ಶಿಕ್ಷಣದ ಪ್ರಮುಖ ಸಂಸ್ಥೆಯಾಗಿದೆ.

ಮೈಸೂರು ನಗರದ ಮೂಲ ಸೌಕರ್ಯಗಳ ಅಭಿವೃದ್ಧಿ: ವಿಶ್ವೇಶ್ವರಯ್ಯ ಅವರು ನೀರಾವರಿ, ನೀರು ಸರಬರಾಜು ಮತ್ತು ಸಾರ್ವಜನಿಕ ಕೆಲಸಗಳಂತಹ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಮೈಸೂರಿನಲ್ಲಿ ಹಲವಾರು ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ ಅವರ ಕೊಡುಗೆಗಳು ಕೃಷಿ ಉತ್ಪಾದಕತೆ ಮತ್ತು ನೀರಿನ ನಿರ್ವಹಣೆಯನ್ನು ಹೆಚ್ಚಿಸಲು ಅಣೆಕಟ್ಟುಗಳು, ಕಾಲುವೆಗಳು ಮತ್ತು ಜಲಾಶಯಗಳ ನಿರ್ಮಾಣವನ್ನು ಒಳಗೊಂಡಿವೆ. ಇದೆ ರೀತಿ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಸ್ಟೇಟ್ ಬ್ಯಾಂಕ ಆಫ್ ಮೈಸೂರು ಜೊತೆ ಹಲವು ಮಜಲಿನಲ್ಲಿ ಗಮನಾರ್ಹ ಕಾರ್ಯವನ್ನು ಪ್ರಾರಂಭಿಸಿದರು. ಮೈಸೂರು ದಿವಾನರಾಗಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ಕೊಡುಗೆಗಳು ಅವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಮತ್ತು ಪುರಸ್ಕಾರಗಳನ್ನು ತಂದುಕೊಟ್ಟಿತು.

**ಸರ್ ಎಂ. ವಿಶ್ವೇಶ್ವರಯ್ಯ ಅವರು ಪಡೆದ ಪ್ರಶಸ್ತಿಗಳು ಮತ್ತು ಗೌರವಗಳು:**

1. 1915ರಲ್ಲಿ ಸಾರ್ವಜನಿಕ ಒಳಿತಿಗಾಗಿ ಅವರು ನೀಡಿದ ಕೊಡುಗೆಗಳಿಗಾಗಿ ಅವರಿಗೆ "ನೈಟ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್ (ಕೆಸಿಐಇ)" ಎಂಬ ಬಿರುದನ್ನು ನೀಡಲಾಯಿತು.
2. 1955ರಲ್ಲಿ ಭಾರತ ಸರ್ಕಾರವು ಅವರ ಹಲವಾರು ಕೈಗಾರಿಕಾ, ಆರ್ಥಿಕ ಮತ್ತು ಸಾಮಾಜಿಕ ಯೋಜನೆಗಳಿಗಾಗಿ ಅವರಿಗೆ ಅತ್ಯುನ್ನತ ನಾಗರಿಕ ಗೌರವ ಅಂದರೆ ಭಾರತ ರತ್ನ ನೀಡಿ ಗೌರವಿಸಿತು.
3. ಲಂಡನ್ನ ಸಿವಿಲ್ ಎಂಜಿನಿಯರ್‌ಗಳ ಸಂಸ್ಥೆಯಿಂದ ಗೌರವ ಸದಸ್ಯತ್ವವನ್ನು ಪಡೆದರು. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ನಿಂದ ಫೆಲೋಶಿಪ್ ಮತ್ತು ಎಂಟು ವಿಶ್ವವಿದ್ಯಾಲಯಗಳಿಂದ ಡಿಎಸ್ಸಿ, ಎಲ್ಎಲ್‌ಡಿ ಮತ್ತು ಡಿ.ಲಿಟ್ ಸೇರಿದಂತೆ ಹಲವಾರು ಗೌರವ ಪದವಿಗಳನ್ನು ಪಡೆದರು.
4. ಸರ್ ಎಂ. ವಿಶ್ವೇಶ್ವರಯ್ಯ ಅವರನ್ನು 1911ರಲ್ಲಿ ಕಿಂಗ್ ಎಡ್ವರ್ಡ್ ಅವರು ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್ ಆಗಿ ನೇಮಿಸಿದರು.
5. ಭಾರತದಲ್ಲಿ ಅವರು 1923ರಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ ಅಧ್ಯಕ್ಷತೆ ವಹಿಸಿದ್ದರು.

# ಗಣಗಳ ಅಧಿಪತಿ, ವಿಘ್ನ ವಿನಾಶಕ ಗಣೇಶ ಚತುರ್ಥಿ

– ಶ್ರೀ ಶಿವಕುಮಾರ ಬಿರಾದಾರ, ತರಬೇತಿ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು



"ಏಕದಂತಾಯ ವಿದ್ಮಹೇ
ವಕ್ರತುಂಡಾಯ ಧೀಮಹಿ
ತನ್ನೋ ದಂತಿ:
ಪ್ರಚೋದಯಾತ್"

ಭಾರತದಲ್ಲಿ ವೈಭವದಿಂದ ಆಚರಿಸಲ್ಪಡುವ ಒಂದು ಹಬ್ಬ. ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲ ಪಕ್ಷದ ಚೌತಿಯ (ಚತುರ್ಥಿಯ) ದಿನ ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ಈ ಹಬ್ಬದಲ್ಲಿ ಗಣಪತಿಯನ್ನು ಪೂಜಿಸಲಾಗುತ್ತದೆ. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಿ, ವ್ರತವೆಂದು ಆಚರಿಸಲಾಗುತ್ತದೆ. ಹಬ್ಬದ ದಿನ ಮೋದಕ, ಕಡುಬು ಎಂಬ ಸಿಹಿ ತಿಂಡಿಯನ್ನು ಮಾಡಿ ಗಣೇಶನಿಗೆ ನೈವೇದ್ಯ ಮಾಡಲಾಗುತ್ತದೆ.

### ಗಣೇಶನ ಹುಟ್ಟು

ಯಾಜ್ಞವಲ್ಕ್ಯ ಸ್ಮೃತಿಯ ಪ್ರಕಾರ ಅಂಬಿಕೆಯು ಗಣಪತಿಯ ತಾಯಿ. ಇನ್ನೊಂದು ಕಥೆಯ ಪ್ರಕಾರ ಆತನು ಪಾರ್ವತಿಯ ಮೈಯಿಂದ ಹುಟ್ಟಿದವನು. ಸ್ವರ್ಣಗೌರಿಯ ಮಾನಸ ಪುತ್ರ ಈತ. ಗೌರಿ ತನ್ನ ಮೈಕೊಳೆಯಿಂದ ಆಕೃತಿಯೊಂದನ್ನು ಸೃಷ್ಟಿಸಿ ಅದಕ್ಕೆ ಜೀವತುಂಬಿ ಸ್ನಾನ ಮಾಡಲು ಹೋಗಿರುತ್ತಾಳೆ. ತಾಯಿಯ ಅಣತಿಯಂತೆ ಗಣಪ ಮನೆಯನ್ನು ಕಾಯುತ್ತಿರುತ್ತಾನೆ. ಶಿವನು ಮನೆಗೆ ಹಿಂತಿರುಗಿದಾಗ, ಗಣಪ ಅವನನ್ನು ತಡೆದು ಮನೆಯೊಳಗೆ ಹೋಗಲು ಅಡ್ಡಿಪಡಿಸುತ್ತಾನೆ. ಇದರಿಂದ ಕುಪಿತಗೊಂಡ ಶಿವ ತನ್ನ ತ್ರಿಶೂಲದಿಂದ ಅವನ ಶಿರವನ್ನು ಕತ್ತರಿಸುವನು. ಸ್ನಾನ ಮುಗಿಸಿ ಬಂದ ಗೌರಿ ಮಗನ ಕಳೇಬರ ಕಂಡು ರೋದಿಸುತ್ತಾಳೆ. ಹೆಂಡತಿಯನ್ನು ಸಮಾಧಾನ ಪಡಿಸುವ ಸಲುವಾಗಿ ಶಿವ ತನ್ನ ಗಣಗಳನ್ನು ಕರೆದು ಉತ್ತರ ದಿಕ್ಕಿಗೆ ಯಾರಾದರೂ ತಲೆ ಹಾಕಿ ಮಲಗಿದ್ದರೆ, ಅಂತಹವರ ತಲೆಯನ್ನು ಕತ್ತರಿಸಿ ತರುವಂತೆ ಆಜ್ಞಾಪಿಸುತ್ತಾನೆ. ಅವರು ಉತ್ತರ ದಿಕ್ಕಿನಲ್ಲಿ ಮಲಗಿದ್ದ ಮರಿಯಾನೆ ತಲೆಯನ್ನು ಕತ್ತರಿಸಿ ತರುತ್ತಾರೆ. ನಂತರ ಅದನ್ನು ಗಣಪನ ಶರೀರಕ್ಕೆ ಅಂಟಿಸುವರು. ಹೀಗಾಗಿ ಗಣಪ ಗಜಮುಖನಾಗಿ, ಗಣಗಳ ಅಧಿಪತಿ ಮತ್ತು ಮೊದಲ ಅಗ್ರಪೂಜೆಗೆ ಅರ್ಹನಾಗುತ್ತಾನೆ. ವಿಘ್ನ ವಿನಾಶಕ ವಿನಾಯಕನಾಗಿರುವನು.

### ಗಣೇಶನ ಹಬ್ಬ

ಮೊದಲ ದಿನ ತಾಯಿ ಸ್ವರ್ಣಗೌರಿಯ ಹಬ್ಬ, ಮಾರನೆ ದಿನವೇ ಗಣೇಶನ ಹಬ್ಬ. ತಾಯಿಯನ್ನು ಮರಳಿ ಕರೆದುಕೊಂಡು ಹೋಗುವ ಕೆಲಸ ಗಣಪನದಾಗಿರುವುದರಿಂದ, ತಾಯಿ ಭೂಲೋಕಕ್ಕೆ ಬಂದ ಮಾರನೆ ದಿನವೇ ಅಜ್ಜಿ ಮನೆಗೆ ಬಂದು, ಅಜ್ಜಿ ಮನೆಯಲ್ಲಿ ಮಾಡಿದ ವಿವಿಧ ಭಕ್ಷ್ಯ ಭೋಜನಗಳನ್ನು ಭಕ್ಷಿಸಿ ತಾಯಿಯೊಂದಿಗೆ ಹಿಂತಿರುಗುತ್ತಾನೆ. ಸಾಮಾನ್ಯವಾಗಿ ಈ ಹಬ್ಬ ಭಾದ್ರಪದ ಚೌತಿಯ ದಿನದಂದು ಬರುತ್ತದೆ. ಆ ದಿನ ಯಾರೂ ಚಂದ್ರನನ್ನು ನೋಡಬಾರದು. ಗಣೇಶ ಭೂಲೋಕಕ್ಕೆ ಬಂದ ದಿನವನ್ನು ವಾರಗಟ್ಟಲೆ ಸಂಭ್ರಮದಿಂದ ಆಚರಿಸುವುದು ಅನಾದಿ ಕಾಲದಿಂದಲೂ ರೂಢಿಯಲ್ಲಿದೆ. ಅಂದು ದೇಗುಲಗಳಲ್ಲಿ ವಿಶೇಷ ಪೂಜೆಗಳನ್ನು ಮಾಡಲಾಗುತ್ತದೆ.

### ಗಣೇಶನ ಹಬ್ಬದ ವೈಶಿಷ್ಟತೆಗಳು

ನಮ್ಮ ದೇಶದಲ್ಲಿ ಗಣಪತಿಯ ಪೂಜೆಯು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಆನೆಗಳ ಹಿಂಡು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆಯನ್ನು ಹಾಳು ಮಾಡುವುದನ್ನು ತಡೆಯುವ ಸಲುವಾಗಿ ರೈತಾಪಿ ಜನಗಳು ಆನೆಯ ಮುಖವುಳ್ಳ ದೇವನನ್ನು ಪೂಜಿಸಿದರೆ, ಗೋದಾಮುಗಳಲ್ಲಿ ಧಾನ್ಯಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನೂ ಪೂಜಿಸಿ ಇಬ್ಬರನ್ನೂ ಸಮಾಧಾನಿಸುವುದೂ ಹಬ್ಬದ ಒಂದು ಕಾರಣವೆಂದು ಕೆಲವರು ಹೇಳುವರು. ಅದಲ್ಲದೇ ಹೊಲಗಳಲ್ಲಿ ನಿಲ್ಲಿಸುವ ಬೆರ್ಚಪ್ಪನಿಗೂ ಗಣಪತಿಯಂತೆ ಡೊಳ್ಳು ಹೊಟ್ಟೆಯನ್ನು ಮಾಡಿರುತ್ತಾರೆ. ಇದಲ್ಲದೇ ಗಣಪತಿಯನ್ನು ಬರ್ಮಾ, ಮಲೇಶಿಯಾ, ಇಂಡೋನೇಶಿಯಾ, ಚೀನಾ, ಸುಮಾತ್ರಾ, ಜಾವಾ, ಜಾಪಾನ್ ಮತ್ತಿತರ ದೇಶಗಳಲ್ಲಿಯೂ ಪೂಜಿಸುತ್ತಿದ್ದರು. ವಿಜ್ಞಾನಿಗಳ ಸೃಷ್ಟಿಯ ವಿಕಾಸಕ್ಕೂ ನಮ್ಮ ಪುರಾಣಗಳಲ್ಲಿ ಹೇಳುವ ದಶಾವತಾರ ಕಥೆಗಳಿಗೂ ಹೋಲಿಕೆಯುಂಟು. ಮೊದಲಿಗೆ ನೀರಿನಲ್ಲಿರುವ ಅವತಾರಗಳಾದರೆ, ನಂತರ ಅರ್ಧ ಪ್ರಾಣಿ ಅರ್ಧ ಮನುಷ್ಯ. ಇದರಲ್ಲಿ ಗಣಪತಿಯೂ ಒಂದಾಗಿದೆ. ಗ್ರೀಕರ ಕಲ್ಪನೆಯಲ್ಲಿಯೂ ಇಂತಹ ಉದಾಹರಣೆಗಳಿವೆ. ಗಣಪತಿಯ ಮೂರ್ತಿಯ ಪೂಜೆಗೆ ಮೊದಲು ಸಗಣಿಯಿಂದ ಮಾಡಿ ಅದರ ಮೇಲೆ ಗರಿಕೆಯನ್ನಿಟ್ಟು ಅದನ್ನು ಪಿಳ್ಳೇರಾಯನೆಂದು ಕರೆದು ಅದಕ್ಕೆ ಪೂಜಿಸುವರು. ಮಿಕ್ಕೆಲ್ಲ ದೇವರುಗಳಂತೆ ಇದಕ್ಕೂ ಷೋಡಶಾಂಗ ಪೂಜಾವಿಧಾನದ ರೀತ್ಯಾ ಪೂಜಿಸುವರು. ಪೂಜೆಯ ನಂತರ ಹತ್ತು ದಿನಗಳ ವರೆಗೆ ನಿತ್ಯ ಪೂಜೆಯನ್ನು ಮಾಡಿ 10ನೇಯ ದಿನ ಅಂದರೆ ಅನಂತ ಚತುರ್ದಶಿಯ ದಿನದಂದು ವಿಸರ್ಜನೆ ಮಾಡುವರು. ದೇಶದ ವಿವಿಧೆಡೆ ವಿವಿಧ ರೀತಿಯಲ್ಲಿ ಗಣಪತಿಯ ಹಬ್ಬವನ್ನಾಚರಿಸುವರು. ದಕ್ಷಿಣ ಭಾರತದಲ್ಲಿ ಮನೆ ಮನೆಗಳಲ್ಲಿ ಗಣಪತಿಯ ಮೂರ್ತಿಗೆ ಪೂಜಿಸಿದರೆ, ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜನಗಳನ್ನು ಒಗ್ಗೂಡಿಸಲು ಆರಂಭಿಸಿದ ಸಾರ್ವಜನಿಕ ಗಣಪತಿ ಪೂಜೆ ಇಂದಿಗೂ ಹಾಗೆಯೇ ಮುಂದುವರೆಯುತ್ತಿದೆ. ಕರ್ನಾಟಕದಲ್ಲಿ ತನ್ನದೇ ಆದ ಪರಂಪರೆ ಹೊಂದಿದ್ದು, ಅಂತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ಡೊಳ್ಳು ಕುಣಿತ, ಹುಲಿವೇಷ, ಯಕ್ಷಗಾನ ಮುಂತಾದವು ಇಲ್ಲಿನ ಗಣೇಶೋತ್ಸವಕ್ಕೆ ಮೆರಗು ತರುತ್ತದೆ. ರಾಜ್ಯದ ಎಲ್ಲ ಭಾಗಗಳಲ್ಲಿ ಸುಂದರವಾಗಿ ಸಂಭ್ರಮದಿಂದ ಆಚರಿಸುವ ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು.

# FINANCIAL MANAGEMENT IN CO-OPERATIVES

- CA. Madhukar Hegde

## Meaning of FM:

Planning, organising, directing and controlling the financial activities such as procurement of funds and utilisation of funds of organisation.

## Elements of FM:

### 1. Financial Decisions:

- Collecting of funds from various sources
- Decision on type of sources
- Decision of period of financing
- Decision on cost of financing
- Decision on the repayment thereof

### 2. Investment Decisions:

- Investment in fixed assets (Capital budget)
- Investment in current assets (Working capital)

### 3. Dividend (returns) Decisions:

- Decision on profit distribution
- Dividend on share capital

## Functions of FM:

### 1. Estimation of Funds requirement:

- Depending on the expected costs
- Profits
- Future business
- Policies of the co-operative
- Adequate estimation to increase earning capacity

### 2. Determination of Funds Composition:

- Short term
- Long term
- Low Cost
- High Cost
- Equity
- Debt

### 3. Choice on Sources of Funds:

- Share Capital
- Deposits
- Borrowings from Banks

### 4. Investment of Funds:

- Invest to earn more profit
- Safety of investments
- Regular returns

### 5. Management of cash:

- Payment of interest
- Admin expenses like salary, rent, electricity etc
- Current liabilities like creditors, deposits etc

### 6. Financial Controls:

- Plan, procure and utilise the funds
- Exercise control over finances
- Use techniques like ratio analysis, financial forecasting, cost benefit analysis etc

## Objectives of FM:

- Being a custodian of money to protect the TRUST of the members
- To ensure regular and adequate supply of funds to the co-operative
- To ensure adequate returns to the members
- To improve earning capacity of the co-operative
- To ensure optimum utilisation of funds
- To reduce cost to the organisation
- To provide economic stability
- To minimise the risk
- To ensure safety on investments and adequate returns
- To plan a sound capital structure- fair composition of equity and debt
- To assist organisation in making critical financial decisions

**Sources of Funds of Co-operatives:**

- Share capital- Regular and Associate
- Deposits- Demand and Time deposits
- Borrowings- Short term, Long term borrowings
- Contribution from members
- Interest on Loans and advances
- Interest on investments
- Loan repayment from borrowers
- Sale of assets
- Other receipts like processing fee, commission, Admission fee etc
- Income from other sources like E-stamps, Insurance Commission etc

**Application of funds:**

- Loans and Advances
- Investments
- Procurement of Fixed Assets
- Advances for utility services
- Interest on deposits
- Interest on borrowings
- Administrative expenses
- Repayment of deposits
- Repayment of share capital
- Dividend to share holders
- Taxes and other statutory dues

**Problems normally noticed in FM of co-operatives:**

- Unable to determine appropriate sources of funds
- Inadequate records of financial transactions
- Inadequate management of cash
- Huge idle funds kept in cash/bank savings/ current accounts
- Delay in taking decisions
- Wrong investment of funds
- Failure in fixation of interest rates- both for deposits and Loans
- Bad loans
- No proper recovery of loans
- Blocking of working capital by investing in unproductive assets
- Unable to determine right composition of funds
- Challenges in assets liability management
- Short term deposits utilised for long term lending
- Inadequate finance/excess finance/untimely financing

**Risks in FM of co-operatives:**

- Political risk
- Reputation risk
- Credit risk

**Cash Management:**

- Optimum utilisation of cash to ensure maximum liquidity and maximum profitability
- Proper collection, disbursement and investment of cash
- Proper utilisation of cash ensures solvency of the co-operatives
- Generate enough cash to meet the expense and other payments and also to expand the business
- Hold right amount of cash to meet immediate and long term needs
- By generating enough cash, co-operatives can meet its everyday business needs and can avoid borrowings

**Internal controls of cash: a) Cash in Hand:**

- Cash to be handled by the authorised person only
- Cash to be kept in safe lockers under joint custody of cashier and one of the officers
- Everyday collections should be deposited in the bank
- All payments should have corresponding

vouchers

- All vouchers to be approved by the authorised person
- Cash book/cash scrolls to be maintained along with the denomination of cash
- For all transactions maker and checker concept should be adopted
- Surprise cash verification by the person not connected to cash at regular intervals
- Surprise verification of cash by the management
- Adequate insurance cover to be obtained for cash
- If there are any ATMs, cash to be verified on regular basis
- ATM cash to be reconciled with the book balanceInternal controls of cash: a) Cash at Bank:
- There should always be joint signatories authorised by the board
- All the bank accounts should be in the name of the co-operative
- There should be proper handling of blank cheques- cheques should be held under proper custody and no blank cheques to be signed
- Bank accounts should be reconciled on regular basis
- Proper control to be ensured while making digital payments like RTGS, NEFT, IMPS etc.
- RTGS, NEFT etc to be handled by two persons with proper passwords
- No password trading to be allowed.
- While making digital payments ensure that the proper messages are sent to the persons not connected with the transactions

**Investment Management:**

- Ensure the safety of the investments
- Investments are to be properly authorised
- Investments are to be risk free
- Ensure that investments yield maximum returns
- Don't invest all funds in one single bank/institution
- Plan your investments in such a way that it minimises your risk
- At no point of time your investment in one bank not to exceed 20% of your total investments
- Returns on investments to be properly followed up
- Be attentive on the media and news to access the risk of your investment
- Investments are to be as per section 18 of the KSS Act, 1997
- Investments are to be as per the guidelines issued by Federal Co-operative in this regard

**Loans Receivable Management:**

- It is the process of ensuring that the borrowers pay their dues on time
- It helps the co-operative to prevent themselves from running out of working capital at any point of time
- It also prevents overdue payments or non-payment of pending amount of the borrowers
- Loan receivables form major part of the co-operative's asset, it leads to the generation of cash in-flow in the books of the co-operative
- The accurate record keeping of loans receivable are required to avoid default in the payment due
- It builds the co-operative's financial and liquidity position
- Proper documentation to be obtained before releasing the loans
- Security to be mortgaged
- Proper credit appraisal of the member borrowers
- Robust credit policy to be prepared by the board and approved by the general body
- Payments to be followed up regularly

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2023-2025.


**Internal Controls of Loans Receivables:**

- There should be periodic aging of receivables
- Schedules to be reconciled with general ledger at regular intervals
- Overdues to be followed up regularly
- Statement of accounts should be sent to defaulters regularly
- Acknowledgement of debts to be obtained as and when required
- Proper legal action to be taken against the defaulters
- Ensure that the mortgaged properties are adequately insured

**Acts/Rules/Guidelines of Regulators in FM:**

- Share capital from a member not to exceed 5% of the total share capital- Section-17A of KSS Act, 1997
- No institutional deposits allowed- Section 17 of KSS Act, 1997
- No deposits from nominal/non-members- Section 22 of KSS Act, 1997
- Investments are to be as per Section 18 of KSS Act, 1997
- No political contributions allowed- Section 19 of KSS Act, 1997
- Deposits and borrowings not to exceed 50 times of Share Capital, Statutory reserve and Building Fund- Rule-3(4)(c) of KSS Rules, 2004
- Loan to a member not to exceed 5% of the working capital
- Loan to directors not to exceed 10% of the working capital
- 20% of the deposits and whole of statutory reserve to be invested outside the business
- CRR and SLR to be maintained as per Section 18 and 24 of B R Act, 1949
- CRAR to be maintained at minimum 9%
- CD ratio not to exceed 70%

**Important Ratios in FM:**

- Cost of fund
- Average yield on Loans and advances
- Average return on Investments
- Average return on earning assets
- Net Interest Margin(Spread)
- Return on Asset
- Working capital
- CD Ratio
- Non interest income to Interest income
- Per employee business
- Operating profit to working capital
- Earnings per Share

**Conclusion:**

- Any activity carried on successfully, resulting in profit is "Business"
- Aim is to maximise the profit
- Minimise cost
- Reduce the risk
- Keep the "TRUST"

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003